Vehicles and Road Traffic Rules, 1945, issued under Notification Nos. :

1. T. 4495—R.T. 16-52-9, dated 31st March 1953.
2. T. 102—R.T. 16-52-11, dated 8th April 1953.
3. T. 924—R.T. 16-52-16, dated 15th June 1953.
4. T. 182—R.T. 125-50-3, dated 14th April 1953.

MYSORE HOUSE RENT AND ACCOMMODATION CONTROL (AMENDMENT) BILL, 1953.

Extension of time for presentation of Report by Select Committee.

Sri A. G. RAMACHANDRA RAO (Minister for Law and Education).—Sir, I beg to move :

"That the time appointed for the presentation of the Report of the Select Committee on the Mysore House Rent and Accommodation Control (Amendment) Bill, 1953 be extended and that the Report be presented before the close of the present session of the Assembly."

Mr. SPEAKER.—The question is :

"That the time appointed for the presentation of the Report of the Select Committee on the Mysore House Rent and Accommodation Control (Amendment) Bill, 1953 be extended and that the Report be presented before the close of the present session of the Assembly."

The motion was adopted.

MYSORE POLICE (SECOND AMENDMENT) BILL, 1953.

Extension of time for presentation of Report by Select Committee.

Sri A. G. RAMACHANDRA RAO.—Sir, I beg to move :

"That the time appointed for the presentation of the Report of the Select Committee on the Mysore Police (Second Amendment) Bill, 1953 be extended and that the Report be presented before the close of the present session of the Assembly."

Mr. SPEAKER.—The question is :

"That the time appointed for the presentation of the Report of the Select Committee on the Mysore Police (Second Amendment) Bill, 1953 be extended and that the Report be presented before the close of the present session of the Assembly."

The motion was adopted.

ANDHRA STATE BILL, 1953.

Motion to approve proposal to introduce in Parliament.

Sri K. HANUMANTHAIYA (Chief Minister).—Sir, I beg to move :

"That this House approves the proposal to introduce in Parliament the Andhra State Bill, 1953."

Mr. SPEAKER.—Motion moved :

"That this House approves the proposal to introduce in Parliament the Andhra State Bill, 1953."

Sri M. V. RAMA RAO (Tumkur).—May I suggest that a copy of the report made by Justice Wanchoo and a copy of the award made by Justice Misra in respect of Bellary taluk be laid on the table of the House to enable Members to inform themselves about the particular disputes and controversies which have necessitated the bifurcation of the District ?

Sri MULKA GOVINDA REDDY (Chitaldrug).—And also copy of the report submitted by the Special Officer deputed for this purpose to Bellary District ?

Sri K. HANUMANTHAIYA.—So far as Justice Wanchoo's report and Justice Misra's award are concerned, they are already public property and I have no objection to lay them on the table of the House. They are also available in the Library. If each one of the Members were to get copies, that would require again printing and it would take considerable amount of time. Therefore, Hon'ble Members may make use of the copies available in the Library.

Regarding the Special Officer's report, it is merely information gathered privately for Government purposes ; it is not a document which deserves publication. Certain information was required for purposes of taking decisions on some of the issues involved. During the debate, I will be able to give any facts and figures that are needed for purposes of discussion. It would not be right for us to publish whatever information that has been given to us by the Special Officer. Therefore I would request the House to proceed with the discussion on the Bill.

Sri M. V. RAMA RAO.—With regard to what the Chief Minister has said that copies are available in the Library, I have ascertained that a copy of the award made by Justice Misra has not been received in the Office of the Mysore Legislature. In respect of the report of Justice Wanchoo, I do not know how many copies are available, but, if it is possible for Government to make available as many number of copies as they happen to possess at present, it would enable the members to study the things, because although it is true that the matter appeared in the newspaper press, I think it is much better to base our observations and remarks upon the authorised publication.

Sri K. HANUMANTHAIYA.—I agree with the Hon'ble Member. We have received only a few copies from the Government of India and some of those copies will be placed in the hands of Members and they may make use of them.

Sri M. V. RAMA RAO.—Copies of Justice Misra's award ?

Sri K. HANUMANTHAIYA.—Yes.

Sri MULKA GOVINDA REDDY.—Regarding the Special Officer deputed to Bellary, the Chief Minister was pleased to say that some of the points or items dealt with by the Special Officer were made use of by the Government to arrive at a decision. When the Government made use of that report to arrive at a decision, it is equally necessary for the Members of this House to know exactly the report of the Special Officer. So it is absolutely necessary that the Government should supply the report, or at least the relevant points that are contained in the report may be made known to the House.

Sri K. HANUMANTHAIYA.—I have already answered that question. It cannot strictly be called a report because it is not very exhaustive. It was not prepared after hearing all the parties ; it was merely a collection of some information. Therefore, we do not propose to print and publish and circulate this matter.

Sri MULKA GOVINDA REDDY.—If that is so, how is it possible for Government to come to a decision ?

Mr. SPEAKER.—The mover of the Bill is expected to make a speech regarding the motion.

Sri K. HANUMANTHAIYA.—I was about to make a speech. In the meanwhile, these questions came in.

Sri J. MOHAMED IMAM (Jagalur).—I think all our deliberations and discussions on this Bill will go to the Government of India, for the perusal of the President. I think in Madras the Chief Minister there requested the members to speak as far as possible in English so that all the discussions may be understood, so that they may be comprehended at the Centre. It is desirable to speak in English. What you say must be understood by the Centre who decides the destiny. I am sure almost all the Members know English.

Sri D. DEVARAJ URS (Hunsur).—That I am not sure.

Mr. SPEAKER.—I leave it to the House.

ಶ್ರೀ ಕೆ. ಹನುಮಂತಯ್ಯ.—ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಏಕೋ ಎದ್ದುನಿಂತುಕೊಂಡರು. ಬಹುಶಃ ನಾನು ಕನ್ನಡದಲ್ಲಿ ಮಾತನಾಡಬೇಕೆಂದು ಸೂಚಿಸುವುದಕ್ಕೆಂದು ಕಾಣುತ್ತದೆ. ಬಳ್ಳಾರಿಯ ಸಿದ್ದಮ್ಮನವರೇ ಹಾಗೆ ಹೇಳಿದಮೇಲೆ, ನಾನು ಕನ್ನಡದಲ್ಲೇ ಮಾತನಾಡುತ್ತೇನೆ.

ಸ್ವಾಮಿ, ಬಳ್ಳಾರಿ ಡಿಸ್ಟ್ರಿಕ್ಟಿನ ಏಳು ತಾಲ್ಲೂಕುಗಳು ಮೈಸೂರು ದೇಶಕ್ಕೆ ಸೇರತಕ್ಕಂಥ ಒಂದು ಸುವರ್ಣ ಅವಕಾಶ ನಮಗೆ ದೊರಕಿದೆ. ಹಿಂದೆಯೂ ಈ ತಾಲ್ಲೂಕುಗಳು ಮತ್ತು ಬಳ್ಳಾರಿ ಡಿಸ್ಟ್ರಿಕ್ಟು, ಅದರ ಸುತ್ತಮುತ್ತಣ ಪ್ರದೇಶ—ಇವೆಲ್ಲವೂ ಮೈಸೂರು ರಾಜ್ಯಕ್ಕೆ ಒಳಪಟ್ಟಿದ್ದುವು. ಆಂಗ್ಲೇಯರ ಕಾಲದಲ್ಲೇ ಅಲ್ಲ, ಅದಕ್ಕಿಂತಲೂ ನಾಲ್ಕೈದು ಶತಮಾನಗಳ ಹಿಂದೆ ಆಳುತ್ತಿದ್ದ ಅರಸರ ಕಾಲದಲ್ಲೂ ಕೂಡಾ ಬಳ್ಳಾರಿ ಡಿಸ್ಟ್ರಿಕ್ಟು ಮೈಸೂರಿನ ಭಾಗವಾಗಿತ್ತು. ಚಾರಿತ್ರಿಕ ಕಾರಣಗಳಿಂದ ಬಳ್ಳಾರಿ ಡಿಸ್ಟ್ರಿಕ್ಟು ಪದೇಪದೇ ಮೈಸೂರು ದೇಶದಿಂದ ಕಸಿದುಕೊಳ್ಳಲ್ಪಡುತ್ತಿದೆ, ಅದು ಪುನಃ ವಾಪಸು ಬರುತ್ತಿದೆ. ಇದು ಹಸು-ಕರುವಿನ ನ್ಯಾಯದಂತಿದೆ. ಕರುವನ್ನು ಎಲ್ಲಿ ಕಟ್ಟಿದ್ದರೂ ಕೂಡ, ಅದು ಕಟ್ಟುಬಿಚ್ಚಿದ ತಕ್ಷಣ ಹಸುವಿನ ಕಡೆಗೆ ಓಡಿಬರುವಹಾಗೆ ಬಳ್ಳಾರಿ ಡಿಸ್ಟ್ರಿಕ್ಟಿನ ಭಾಗಗಳು ಮೈಸೂರಿನ ಕಡೆಗೆ ಧಾವಿಸಿ ತಾಯಿ ಹತ್ತಿರ ಕರುವು ಬರುವ ಹಾಗೆ ಬರುತ್ತಿವೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ತಾಯಿಯ ಕೆಚ್ಚಲಲ್ಲಿ ಬಹಳ ಹಾಲಿದೆ!

ಶ್ರೀ ಕೆ. ಹನುಮಂತಯ್ಯ.—ಉತ್ತರೋತ್ತರ ಆ ಹೆಣ್ಣು ಕರುವೂ ಹಾಲು ಕೊಡುತ್ತದೆ.

ಆದುದರಿಂದಲೇ ಮೈಸೂರು ಸರ್ಕಾರದವರೂ ಮತ್ತು ಮೈಸೂರು ಮಹಾಜನರೂ ಕೂಡ ಬಳ್ಳಾರಿಯ ಏಳು ತಾಲ್ಲೂಕುಗಳು ಮೈಸೂರಿಗೆ ಬರುವುದನ್ನು ಹೆಚ್ಚುಹೃತ್ಪೂರ್ವಕವಾಗಿ, ಪ್ರೀತಿಯುತವಾಗಿ ಸ್ವಾಗತಿಸುತ್ತಿರುವುದು. ಈ ಸಹಜ ಬಾಂಧವ್ಯವನ್ನು ಯಾರೂ ತಪ್ಪಾಗಿ ತಿಳಿದುಕೊಳ್ಳಬಾರದು. ಮೈಸೂರು ದೇಶದ ಹೊರಗಿರುವ ಕೆಲವು ಆಂಧ್ರ ಮುಖಂಡರು ಈ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಅಸಮಾಧಾನ ಪಟ್ಟಿದ್ದಾರೆ. ನ್ನಾನಾದರೋ, ವಿಧಾನ ಪರಿಷತ್ತಿನಲ್ಲಿ ಮೊರೆಯಿಟ್ಟಹಾಗೆ ಇಲ್ಲಿಯೂ ಮೊರೆಯಿಡುತ್ತೇನೆ; ಈ ಸಹಜ ಬಾಂಧವ್ಯದಿಂದ ಸಂಪ್ರದಾಯಾನುಸಾರವಾಗಿ ಬಳ್ಳಾರಿಯ ಈ ಏಳು ತಾಲ್ಲೂಕುಗಳು ಮೈಸೂರಿಗೆ ಸೇರಿವೆ, ತಾವು ತಾತ್ಕಾಲಿಕವಾಗಿ ಪಡುತ್ತಿರುವ ಅಸಮಾಧಾನವನ್ನು ಉಪಶಮನ ಮಾಡಿಕೊಂಡು ಈ ಪ್ರಶ್ನೆಯು ಸೌಹಾರ್ದಯುತವಾಗಿ ಪರಿಹಾರವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮದರಾಸು ಅಸೆಂಬ್ಲಿಯಲ್ಲಿ ಈ ಪ್ರಶ್ನೆ ಬಹಳ ಚರ್ಚೆಯಾದಮೇಲೆ ಒಂದು ತಿದ್ದುಪಡಿ ಕೂಡ ಅಲ್ಲಿ ಸೂಚಿತವಾಗಿ ಅದು ಒಂದು ಓಟಿನಿಂದ ಮಾತ್ರ ಅಂಗೀಕಾರವಾಗಿದೆ. ಆ ತಿದ್ದುಪಡಿಯ ಪ್ರಕಾರ, ನಾನು ಈ ಪೂರ್ವದಲ್ಲೇ ಹೇಳಿರುವಹಾಗೆ ನೀಲಗಿರಿಯಿಂದ ಹಿಡಿದು ಬಂಗಾಳ, ಒರಿಸ್ಸಾ ಎಲ್ಲೆಯವರೆಗೆ ಎಲ್ಲಾ ಸಂಸ್ಥಾನಗಳ ಎಲ್ಲೆಗಳನ್ನೂ ಕಲಕತಕ್ಕ ಒಂದು ದೊಡ್ಡ ಪ್ರಯತ್ನವಿದೆ. ಈ ರೀತಿ ಸಂಸ್ಥಾನ ಸಂಸ್ಥಾನಗಳು ಇಷ್ಟು ದೊಡ್ಡ ಸಾವಿರಾರು ಮೈಲಿಗಳಿರುವ ಎಲ್ಲೆಗಳನ್ನೇ ಕಲಕುವುದಕ್ಕೆ ಪ್ರಯತ್ನಪಟ್ಟರೆ ಇದರಿಂದ ಒಳ್ಳೆಯ ವಾತಾವರಣ ಇಂಡಿಯಾ ದೇಶದಲ್ಲಿರುವುದಿಲ್ಲ. ಇದನ್ನು ಎರಡು ಕೋಣಗಳಿಂದ ಬಗೆಹರಿಸಬೇಕು. ಸಾವಧಾನವಾಗಿ ಸಮರಸಯುತವಾಗಿ ಬಗೆಹರಿಸಬೇಕು. ಈ ದೃಷ್ಟಿಯಿಂದ ಮಾತ್ರ ಮೈಸೂರು ಮಹಾಜನರೂ ಸರ್ಕಾರದವರೂ ಇಂಥ ಪ್ರಶ್ನೆಯನ್ನು ಪರಿಶೀಲಿಸುತ್ತಾರೆ. ಬಳ್ಳಾರಿಯ ಏಳು ತಾಲ್ಲೂಕುಗಳು ಅಥವಾ ಬಳ್ಳಾರಿ ಪೂರ್ತಿಯಾಗಿ ಮೈಸೂರು ದೇಶಕ್ಕೆ ಬೇಕೇಬೇಕೆಂಬ ಹಟವನ್ನು ಸತ್ಯಾಗ್ರಹವನ್ನು ಮೈಸೂರಿನವರು ಆಚರಿಸಲಿಲ್ಲ; ಉಪವಾಸ ವ್ರತವನ್ನೂ ಕೂಡ ಕೈಗೊಂಡಿಲ್ಲ. ಆದರೆ ಎಲ್ಲಿ ಸಹಜವಾದ ಒಂದು ಆಡಳಿತ ನಡೆಯಬೇಕೋ ಅಲ್ಲಿ ಅದು ನಡದೇ ನಡೆಯುತ್ತದೆ. ಒಂದು ಸಹಜತೆಯಿಲ್ಲದಿದ್ದರೆ ಎಷ್ಟೇ ಕಟ್ಟು ಮಾಡಿದರೂ ಎಷ್ಟೇ ಒತ್ತಾಯ ಮಾಡಿದರೂ ಅದರ ಫಲ ಬೇರೆಯಾಗುವುದಿಲ್ಲ. ಇದಕ್ಕೆ ಬಳ್ಳಾರಿಯ ಈ ಏಳು ತಾಲ್ಲೂಕುಗಳೇ ನಿದರ್ಶನ. ಈ ಏಳು ತಾಲ್ಲೂಕುಗಳಲ್ಲಿ ಬಹುಮತವಾಗಿ, ಬಹುಜನರು ಕನ್ನಡ ಮಾತನಾಡುವವರಿದ್ದಾರೆ, ಎನ್ನುವುದು ಒಂದು ವಾದವಾದರೂ ಕೂಡ ನಾನು ಆ ವಾದವನ್ನು ಅಷ್ಟಾಗಿ ಸಮರ್ಥಿಸುತ್ತಿಲ್ಲ. ಕನ್ನಡ ಮಾತನಾಡುವವರಾಗಲಿ, ತೆಲುಗು ಮಾತನಾಡುವವರಾಗಲಿ, ಬೇರೆ ಭಾಷೆ ಮಾತನಾಡುವವರಾಗಲಿ, ಎಲ್ಲರೂ ಇಂಡಿಯಾ ದೇಶದ ಪ್ರಜೆಗಳು ಎಂಬುದು ಹೊಸ ರಾಜ್ಯಾಂಗ ಬಂದಮೇಲೆ ಸಿದ್ಧಾಂತವಾಗಿದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ, ಇಂಗ್ಲೀಷಿನಲ್ಲಿ ಹೇಳಬೇಕಾದರೆ, there are no separate citizenships in India. There are not what are called Andhra citizens, Tamil citizens, Mysore citizens or Bengal citizens. The Constitution does not recognise separate citizenship. ಆದುದರಿಂದ ಎಲ್ಲರೂ ಒಂದು ರಾಷ್ಟ್ರದ ಪ್ರಜೆಗಳಾಗಿರುವುದರಿಂದ, ಒಂದು ಆಳ್ವಿಕೆಗೆ ಸೇರಿರುವುದರಿಂದ ಭಾಷೆಯ ಆಧಾರದ ಪ್ರಾಂತ ರಚನೆಯ ಮೇಲೆ ಒಂದು ಭಕ್ತಿಯನ್ನು ಬೆಳೆಸಿಕೊಂಡು ಹೋಗುವುದು ಈ ಆಧುನಿಕ ಕಾಲಕ್ಕೆ ಅಷ್ಟು ಅನುಗುಣವಾಗಿಲ್ಲ. ಆದುದರಿಂದ ನಾನು ಹೇಳುತ್ತಿರುವುದು ಬಳ್ಳಾರಿಯ ತಾಲ್ಲೂಕುಗಳು ಮೈಸೂರು ದೇಶಕ್ಕೆ ಸೇರಬೇಕಾದರೆ, ಅಲ್ಲಿನ ಜನರ ಅಭಿಪ್ರಾಯಕ್ಕನುಗುಣವಾಗಿ ಸೇರಿರುವುದನ್ನು ಸ್ವಾಗತಿಸುತ್ತೇನೆ. ಬಳ್ಳಾರಿ ತಾಲ್ಲೂಕಿನ ಅನೇಕ ತೆಲುಗರೂ ಮೈಸೂರು ದೇಶಕ್ಕೆ ಸೇರಬೇಕೆಂದು ಇಷ್ಟಪಟ್ಟಿದ್ದಾರೆ. ಆದುದರಿಂದ ಈ ಪ್ರಶ್ನೆ ಕನ್ನಡ ಮಾತನಾಡುವವರಿಗೆ ಮಾತ್ರ ಸೇರಿದುದು ಎಂಬುದನ್ನು ನಾನು ಸ್ವಾಗತಿಸುತ್ತಿಲ್ಲ. ಬಳ್ಳಾರಿಯ ಏಳು ತಾಲ್ಲೂಕುಗಳಲ್ಲಿ ಉರ್ದು, ಮರಾಠಿ ಅಥವಾ ಇನ್ನಾವ ಭಾಷೆಯನ್ನು ಮಾತನಾಡಲಿ, ಅಲ್ಲಿನ ಶೇಕಡ 90ಕ್ಕಿಂತ ಹೆಚ್ಚು ಜನರು ಮೈಸೂರು ದೇಶಕ್ಕೆ ಸೇರಬೇಕೆಂಬ ಸೌಹಾರ್ದವನ್ನು ತೋರಿಸಿದ್ದಾರೆ. ಅದಕ್ಕೆ ಪ್ರತಿಸೌಹಾರ್ದವನ್ನು ಮೈಸೂರು ಶಾಸನಸಭೆ ಮತ್ತು ಜನರು ತೋರಿಸಬೇಕಾಗಿದೆ.

ಶ್ರೀ ಎಂ. ವಿ. ರಾಮರಾವ್.—ಶೇಕಡ 90ರಷ್ಟು ಜನ ಈ ರೀತಿ ಅಭಿಪ್ರಾಯಪಟ್ಟರೆಂದು ಹೇಳಿದಿರಿ. ಇದನ್ನು ಹೇಗೆ ಗೊತ್ತುಮಾಡಿದಿರಿ? ಯಾರು ಗೊತ್ತು ಮಾಡಿದರು?

ಶ್ರೀ ಕೆ. ಹನುಮಂತಯ್ಯ.—ಅನೇಕ ಸಾರಿ ನಾವು ಲೆಕ್ಕಹಾಕದೇ ಇದ್ದರೂ, ಅಳತೆ ಹಾಕದೇ ಇದ್ದರೂ ನಮ್ಮ ಮನಸ್ಸಿಗೆ ಭಾಸವಾಗುತ್ತದೆ.

(ಶ್ರೀ ಕೆ. ಹನುಮಂತಯ್ಯ.)

ಆದುದರಿಂದ ನಾವು ಬಳ್ಳಾರಿಯ ಜನರನ್ನು ಸ್ವಾಗತಿಸುತ್ತೇವೆ. ಬಳ್ಳಾರಿ ತಾಲ್ಲೂಕಿನಲ್ಲಿ ಕೆಲವು ಮಂದಿ ಆಂಧ್ರರೂ ಎಂದರೆ ತೆಲುಗುಮಾತನಾಡುವವರೂ ಕೂಡ ಇದ್ದಾರೆಂದು ನಾನು ಬಿನ್ನಹಮಾಡಿದ್ದೇನೆ. ಮೈಸೂರು ದೇಶದಲ್ಲಿ ಅನೇಕ ಮಂದಿ ತೆಲುಗು ಮಾತನಾಡುವವರಿದ್ದಾರೆ, ತಮಿಳು ಮಾತನಾಡುವವರಿದ್ದಾರೆ, ಇತರ ಭಾಷೆಗಳನ್ನು ಮಾತನಾಡುವವರಿದ್ದಾರೆ, ಕನ್ನಡ ಮಾತನಾಡುವವರೂ ಇದ್ದಾರೆ. ಆದರೆ ನಾವು ನಮ್ಮ ರಾಜಕೀಯ, ಸಾಮಾಜಿಕ ಚಿತ್ರವನ್ನು ಭಾಷೆಯ ಆಧಾರದ ಮೇಲೆ ರೂಪಿಸುವುದಕ್ಕೆ ಯಾವಾಗಲೂ ಪ್ರಯತ್ನಪಟ್ಟಿಲ್ಲ; ಆ ರೀತಿ ಯಾರ ಮನಸ್ಸೂ ಇದುವರೆಗೂ ಹರಿಯಲಿಲ್ಲ. ಇದು ಮೈಸೂರಿನ ಮಹಾವೈಶಿಷ್ಟ್ಯ. ಇದನ್ನು ಕಾಪಾಡಿಕೊಂಡು ಬರಬೇಕೆಂಬುದೇ ಅನೇಕರ ಅಭಿಪ್ರಾಯವಾಗಿದೆ. ಹೀಗೆ ಕಾಪಾಡಿಕೊಂಡು ಬರುವುದು ಸೂಕ್ತವೂ ಸಹಜವೂ ಆಗಿದೆ. ಆ ವೈಶಿಷ್ಟ್ಯವೇ ಈ ದಿವಸ ನಮ್ಮಲ್ಲಿ ಉತ್ಸಾಹವನ್ನೂ ಚೈತನ್ಯವನ್ನೂ ಉಂಟುಮಾಡಿರುವುದು. ಈ ರೀತಿ ನಾನು ಹೇಳಿದ ಮಾತ್ರಕ್ಕೆ ಈ ದಿವಸ ಮೈಸೂರು ದೇಶ ಎಷ್ಟಿದೆಯೋ ಇಷ್ಟೇ ಇರಬೇಕು, ವಿಶಾಲವಾಗಬಾರದು ಎಂದು ನನ್ನ ಅಭಿಪ್ರಾಯವಲ್ಲ. ಮೈಸೂರು ದೇಶದ ಅಕ್ಕಪಕ್ಕದ ನೆರೆಹೊರೆಯ ಜನರು ಮೈಸೂರು ದೇಶಕ್ಕೆ ಸೇರಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರೆ ಅವರಿಗೆ ಸ್ವಾಗತವನ್ನು ನೀಡಬೇಕೆಂದು ಬಹುಮತದ ಅಭಿಪ್ರಾಯ ಮೈಸೂರುದೇಶದಲ್ಲಿದೆ. ಮೈಸೂರಿನಲ್ಲಿ ರಾಜ್ಯಾಂಗರಚನಾ ಸಭೆ ಅಥವಾ 'ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ' ಎಂದು ಏನು ಮಾಡಿದ್ದೆವೋ ಆ ಸಭೆಯವರು ಸರ್ವಾನುಮತದಿಂದ ಒಂದು ನಿರ್ಧಾರವನ್ನು ಸ್ವೀಕರಿಸಿದರು. ಅದರ ಅರ್ಥ ಮೈಸೂರು ದೇಶದ ಅಕ್ಕಪಕ್ಕದ ಪ್ರಾಂತದ ಜನರು ಮೈಸೂರು ದೇಶಕ್ಕೆ ಸೇರಬಯಸುವುದಾದರೆ ಅದನ್ನು ಮೈಸೂರು ದೇಶಕ್ಕೆ ಸೇರಿಸಿಕೊಳ್ಳಬೇಕೆಂಬುದೇ ಆಗಿದೆ. ಆ ತತ್ವಕ್ಕನುಸಾರವಾಗಿ, ಆ ನಿರ್ಣಯದ ತಿರುಳಿಗನುಸಾರವಾಗಿ, ಮೈಸೂರು ಸರ್ಕಾರ ತನ್ನ ನೀತಿಯನ್ನು ರೂಪಿಸಿದೆ. ಮೈಸೂರು ದೇಶಕ್ಕೆ ದಕ್ಷಿಣಕನ್ನಡ ಅಥವಾ ಉತ್ತರ ಕರ್ನಾಟಕ ಸೇರಬೇಕೆಂಬ ಅಭಿಪ್ರಾಯವನ್ನು ಸೂಚಿಸಿದರೆ, ಆ ಪ್ರಶ್ನೆಗಳು ಉದ್ಭವಿಸಿದಾಗ ನಾವು ಕುಳಿತು ಪರ್ಯಾಲೋಚನೆಮಾಡಿ, ತೀರ್ಮಾನಮಾಡಬೇಕು. ಇದರಲ್ಲಿ ನನಗೇನೂ ಕಷ್ಟಕಾಣುವುದಿಲ್ಲ. ಅದರ ಆ ಪ್ರಶ್ನೆ ಬರುವುದಕ್ಕೆ ಮೊದಲೇ ಮಾಡಿದರೆ ಕಷ್ಟವೆಂದು ಕಾಣುತ್ತದೆ. ಅನೇಕವೇಳೆ ಹೀಗಾಗುತ್ತದೆ. ಪ್ರಶ್ನೆ ನಮ್ಮ ಮುಂದೆ ಬಂದಾಗ, ಅನೇಕಸಾರಿ, ಸೌಹಾರ್ದದಿಂದ, ಸುಗಮವಾಗಿ ಬಗೆಹರಿಯುತ್ತದೆ.ಬಳ್ಳಾರಿತಾಲ್ಲೂಕುಗಳ ವಿಷಯವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಇಂಡಿಯಾ ಸರ್ಕಾರದವರು ಒಂದು ನಿರ್ಧಾರಕ್ಕೆ ಬಂದು ಮೈಸೂರು ಶಾಸನಸಭೆಗೆ ಈರೀತಿ ತಿಳಿಸುವುದಕ್ಕೆ ಮೊದಲೇ ಇದನ್ನು ಚರ್ಚೆಗೆ ಇಟ್ಟುಕೊಂಡಿದ್ದರೆ, ಬಹಳ ಕಷ್ಟವಾಗುತ್ತಿತ್ತು. ಇದು ಯಾವರೂಪ ತಾಳುತ್ತಿತ್ತೋ ಗೊತ್ತಿಲ್ಲ. ಆದರೆ ನಿಖರವಾಗಿ, ವಿಧಿವತ್ತಾಗಿ ನಮ್ಮ ಮುಂದೆ ಬಂದಾಗ ಎಷ್ಟು ಸಹಾನುಭೂತಿಯಿಂದ, ಎಷ್ಟು ಸೌಹಾರ್ದದಿಂದ ಬಗೆಹರಿಯುತ್ತಿದೆ ಎಂಬುದನ್ನು ತಾವೇ ನೋಡಿದ್ದೀರಿ. ಇದೇರೀತಿ ಇತರ ನೆರೆಹೊರೆಯ ಪ್ರಾಂತಗಳ ಯಾವ ಡಿಸ್ಟ್ರಿಕ್ಟೇ ಆಗಲಿ, ಆಯಾ ಪ್ರಶ್ನೆ ಬಂದಾಗ ಅದನ್ನು ಪರಿಶೀಲಿಸಿದರೆ, ಎಲ್ಲ ಸಮಸ್ಯೆಯೂ ಬಗೆಹರಿಯುತ್ತದೆ, ಸಮರಸವಾಗಿ ಬಗೆಹರಿಯುತ್ತದೆ ಎಂದು ನನ್ನ ನಂಬಿಕೆ. ಆದುದರಿಂದ ಅಖಿಲ ಕರ್ನಾಟಕವನ್ನು ರೂಪಿಸಬೇಕೆನ್ನುವವರೂ ಕೂಡ ಈ ಪ್ರಶ್ನೆಯನ್ನು ಸಾವಧಾನ ದೃಷ್ಟಿಯಿಂದ ನೋಡಬೇಕು. ಮೈಸೂರು ದೇಶ ಈಗಿರುವ ಹಾಗೆಯೇ ಇರಬೇಕು, ಒಂದು ಅಂಗುಲ ಕೂಡ ಇನ್ನು ವಿಸ್ತಾರವಾಗಬಾರದು ಎಂದಿಟ್ಟುಕೊಂಡಿದ್ದರೂ, ಕಾಲ ಬದಲಾಯಿಸುತ್ತದೆ, ಈ ಪ್ರಶ್ನೆಗಳೂ ಕಾಲಾನುಗುಣವಾಗಿ ರೂಪ ತಾಳುತ್ತವೆ, ಆಯಾ ಕಾಲಕ್ಕೆ ಸರಿಯಾದ ಉತ್ತರವನ್ನು ನಾವು ಕೊಡಬೇಕಾಗುತ್ತದೆ ಎಂದು ತಿಳಿದು ದೂರದೃಷ್ಟಿಯಿಂದ ಪರಿಶೀಲನೆಮಾಡಬೇಕು. ಈ ಎರಡು 'ದೃಷ್ಟಿ'ಗಳೂ ಕೂಡ ಗಂಗಾ ಯಮುನಾ ನದಿಗಳು ಬೇರೆ ಬೇರೆ ಕಡೆ ಹುಟ್ಟಿದರೂ ಪ್ರಯಾಗದಲ್ಲಿ ಒಂದೇ ಕಡೆ ಸೇರುವಹಾಗೆ ಪ್ರೀತಿಯಿಂದ ಈ ಎರಡೂ ಕೂಡ ಒಂದೇ ನಿರ್ಣಯವನ್ನು, ಒಂದೇ ತೀರ್ಮಾನವನ್ನು ತೆಗೆದುಕೊಳ್ಳುತ್ತವೆ ಎಂಬ ನಿಶ್ಚಲವಾದ ನಂಬಿಕೆ ನನ್ನ ಮನಸ್ಸಿನಲ್ಲಿದೆ.

ಬಳ್ಳಾರಿಯ ಈ ಏಳು ತಾಲ್ಲೂಕುಗಳ ವಿಸ್ತೀರ್ಣ 3,821 ಚದುರ ಮೈಲಿಗಳು. ಪ್ರಜಾಸಂಖ್ಯೆ 7,73,712. ಈ ಪ್ರಾಂತ ಮೈಸೂರು ದೇಶಕ್ಕೆ ಸೇರುವುದರಿಂದ ಹಣಕಾಸಿನ ಪರಿಸ್ಥಿತಿಯಲ್ಲಿ, ಸದ್ಯದ ಪರಿಸ್ಥಿತಿಯಲ್ಲಿ, ಸ್ವಲ್ಪ ಅನಾನುಕೂಲವಾಗುತ್ತದೆ ಎಂಬ ಶಂಕೆ ಕೂಡ ಇದೆ. ಆದಾಯಕ್ಕಿಂತಲೂ ಖರ್ಚು ಸುಮಾರು 30 ಲಕ್ಷ ರೂಪಾಯಿ ಹೆಚ್ಚಾಗಿದೆ ಎಂಬುದನ್ನು ಜಸ್ಟಿಸ್ ವಾಂಛೂರವರು ಪರಿಶೀಲನೆಮಾಡಿ ಹೇಳಿದ್ದಾರೆ. ಈ ರೀತಿ 30 ಲಕ್ಷರೂಪಾಯಿ ಹೆಚ್ಚು ಖರ್ಚಿರುವುದು ನಮ್ಮನ್ನೇನೂ ಗಾಬರಿಗೊಳಿಸಬೇಕಾಗಿಲ್ಲ. ಅಲ್ಲಿ ಒಂದು ಸೆಂಟ್ರಲ್ ಜೈಲಿದೆ. ಅದಕ್ಕೆ ಆಂಧ್ರ, ತಮಿಳುನಾಡು ಮತ್ತು ಕೇರಳ ಹಾಗೂ ಮದರಾಸು ಸರ್ಕಾರಗಳವರು ಅವರ ಕೋರ್ಟುಗಳಲ್ಲಿ ಶಿಕ್ಷೆಗೊಳಗಾಗತಕ್ಕ ಎಲ್ಲಾ ವರ್ಗದ, ಎಲ್ಲಾ ಪ್ರಾಂತದ ಖೈದಿಗಳನ್ನೂ ಈಗ ಕಳುಹುತ್ತಿದ್ದಾರೆ. ಇದಕ್ಕಾಗಿ ಎಂಟು ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಈ ಏಳು ತಾಲ್ಲೂಕುಗಳು ಮೈಸೂರು ದೇಶಕ್ಕೆ ಸೇರಿದಮೇಲೆ ಮದರಾಸು ಸರ್ಕಾರದವರು ತಮ್ಮ ಖೈದಿಗಳನ್ನು ಅಲ್ಲಿಗೆ ಕಳುಹಿಸುವುದಿಲ್ಲ. ಅದೇ ರೀತಿ ಆಂಧ್ರ ಸರ್ಕಾರದವರೂ ಕಳುಹಿಸುವುದಿಲ್ಲ..........

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಆದರೆ ಈ ಮಸೂದೆಯಲ್ಲಿ ಅವಕಾಶಕೊಟ್ಟಿದ್ದಾರೆ.

ಶ್ರೀ ಕೆ. ಹನುಮಂತಯ್ಯ.—ಅದಕ್ಕೆ ಉತ್ತರ ಹೇಳುತ್ತೇನೆ.

ಈ ಜೈಲಿನ ಈ ಖರ್ಚನ್ನು ಉತ್ತರೋತ್ತರ ಆಯಾ ಸರ್ಕಾರಗಳೇ ವಹಿಸಿಕೊಳ್ಳುವುದರಿಂದ ನಮಗೆ ಅಷ್ಟೇನೂ ಭಾರವಾಗುವುದಿಲ್ಲ. ತಾತ್ಕಾಲಿಕವಾಗಿ, ಈ ಖೈದಿಗಳನ್ನು ಆಯಾ ಸರ್ಕಾರಗಳು ವರ್ಗಮಾಡಿಕೊಳ್ಳುವವರೆಗೆ ಅವರ ಖರ್ಚನ್ನು ಆಯಾ ಸರ್ಕಾರಗಳೇ ವಹಿಸಿಕೊಳ್ಳಬೇಕಾಗಿದೆ. ಆಂಧ್ರರು, ಎಂದರೆ ಹೊಸ ಅರ್ಥದಲ್ಲಿ ಹೇಳುತ್ತಿದ್ದೇನೆ. ಹೊಸ ಪ್ರಾಂತವಾದ ಆಂಧ್ರ ಪ್ರಾಂತಕ್ಕೆ ಸೇರಿದ ಖೈದಿಗಳ ಖರ್ಚನ್ನು ಆಂಧ್ರ ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. ಮದರಾಸು ದೇಶದವರ ಖರ್ಚನ್ನು ಮದರಾಸು ಸರ್ಕಾರ ವಹಿಸಿಕೊಳ್ಳಬೇಕಾಗಿದೆ. ಹೀಗೆ ಅವರವರು ಅವರವರ ಖರ್ಚುಗಳನ್ನು ವಹಿಸಿಕೊಳ್ಳಬೇಕಾಗಿರುವುದರಿಂದ ಪೂರ್ತಿಯಾಗಿ ಈ ಎಂಟು ಲಕ್ಷ ರೂಪಾಯಿಗಳ ಹೊರೆ ಮೈಸೂರು ಸರ್ಕಾರದಮೇಲೆಯೇ ಬೀಳುವುದಿಲ್ಲ.

10 A.M.

ಅನಂತರ ತುಂಗಭದ್ರ ಪ್ರಾಜೆಕ್ಟ್ ಬೇರೆ ಇದೆ. ಇದು ಒಂದು ಬಹಳ ದೊಡ್ಡ ಪ್ರಾಜೆಕ್ಟ್. ಈ ಅಂಶವನ್ನು ತಾವುಗಳೆಲ್ಲರೂ ಈಗಾಗಲೇ ತಿಳಿದುಕೊಂಡಿದ್ದೀರಿ. ಇದು ನಮ್ಮ ಕನ್ನಂಬಾಡಿ ಕಟ್ಟೆಗಿಂತಲೂ ಸುಮಾರು ಮೂರರಷ್ಟು ದೊಡ್ಡದು. ಕನ್ನಂಬಾಡಿ ಕೆರೆಯ ನೀರು ನಿಲ್ಲತಕ್ಕ ಪ್ರದೇಶದ ವಿಸ್ತೀರ್ಣ ಸುಮಾರು 48 ಚದರ ಮೈಲಿಗಳು. ಆದರೆ ತುಂಗಭದ್ರಾ ಪ್ರಾಜೆಕ್ಟಿನ ನೀರು ನಿಲ್ಲತಕ್ಕ ಪ್ರದೇಶದ ವಿಸ್ತೀರ್ಣ ಸುಮಾರು 133 ಚದರ ಮೈಲಿಗಳು. ಹೀಗೆ ಇದರ ವಿಚಾರವಾಗಿ ಇನ್ನೂ ಬೇರೆ ಬೇರೆಯಾದ ಅಂಕಿ ಅಂಶಗಳಿವೆ, ಆದರೆ ಇಂಥ ಒಂದು ದೊಡ್ಡ ಪ್ರಾಜೆಕ್ಟ್ ಮೈಸೂರು ಒಂದಕ್ಕೇನೆ ಸಂಪೂರ್ಣವಾಗಿ ಸೇರುವುದಿಲ್ಲ. ಇದರಲ್ಲಿ ಹೈದರಾಬಾದ್ ಸರ್ಕಾರಕ್ಕೆ ಹಕ್ಕಿರುತ್ತದೆ, ಈಗ ಪ್ರಾರಂಭವಾಗತಕ್ಕ ಆಂಧ್ರ ಸರ್ಕಾರಕ್ಕೆ ಹಕ್ಕಿರುತ್ತದೆ; ಮತ್ತು ಮೈಸೂರು ಸರ್ಕಾರಕ್ಕೂ ಹಕ್ಕಿರುತ್ತದೆ. ಹೀಗೆ ಇದರ ಹಕ್ಕುಬಾಧ್ಯತೆಗಳು ಮೂರು ಸರ್ಕಾರಗಳಿಗೂ ಸೇರಿರುತ್ತವೆ. ಇವು ಯಾವ ಯಾವ ರೀತಿ ಒಪ್ಪಂದವಾಗಬೇಕು ಅನ್ನುವುದನ್ನೆಲ್ಲಾ ಈ ಬಿಲ್ಲಿನಲ್ಲಿ ತಿಳಿಸಲಾಗಿದೆ. ಕನ್ನಡ ನಾಡಾದ ನಮ್ಮ ಮೈಸೂರು ದೇಶಕ್ಕೆ ಸೇರುವ ಬಳ್ಳಾರಿಯ ಆ ಏಳು ತಾಲ್ಲೂಕುಗಳಲ್ಲಿ ಈ ಪ್ರಾಜೆಕ್ಟಿನಿಂದ 92 ಸಾವಿರ ಎಕರೆ ಸಾಗುವಳಿ ಆಗುತ್ತದೆಂದೇ ಲೆಕ್ಕ ಹಾಕಿದ್ದಾರೆ. ಹೀಗೆ ಮೈಸೂರು ದೇಶಕ್ಕೆ ಸೇರತಕ್ಕ ಆ ಏಳು ತಾಲ್ಲೂಕುಗಳಲ್ಲಿ 92 ಸಾವಿರ ಎಕರೆ ಜಮೀನು ನೀರಾವರಿಯಿಂದ ಸಾಗುವಳಿಯಾಗುವುದರಿಂದ, ಒಳ್ಳೆಯದಾಗುತ್ತದೆ, ಉತ್ಪತ್ತಿ ಹೆಚ್ಚಾಗುತ್ತದೆ ಮತ್ತು ಆದಾಯ ಬರುತ್ತದೆ.

ಶ್ರೀ ಎಂ. ವಿ. ರಾಮರಾವ್.—ಆಂಧ್ರ ಸಂಸ್ಥಾನಕ್ಕೆ ಎಷ್ಟು ಎಕರೆ ನೀರಾವರಿ ಸೇರಿರುತ್ತದೆ?

ಶ್ರೀ ಕೆ. ಹನುಮಂತಯ್ಯ.—ಒಂದೊಂದಾಗಿ ಎಲ್ಲವನ್ನೂ ತಿಳಿಸುತ್ತೇನೆ. ನಾನಾಗಲೇ ತಿಳಿಸಿದಂಥ 92 ಸಾವಿರ ಎಕರೆ ಜಮೀನು ಲೋ—ಲೆವಲ್ ಛಾನಲ್ಲಿನ ಕೆಳಗೆ ಇರತಕ್ಕುದು. 92 ಸಾವಿರ ಎಕರೆಗಳ ಪ್ರದೇಶಕ್ಕೆ ನೀರನ್ನೊದಗಿಸುವ ಆ ಲೋ ಲೆವಲ್ ಛಾನಲ್ಲಿನ ಉದ್ದ ಸುಮಾರು 225 ಮೈಲಿಗಳು. ಬಳ್ಳಾರಿಯೊಂದು ತಾಲ್ಲೂಕಿನಲ್ಲೇ ಈ ಛಾನಲ್ ಸುಮಾರು 107 ಮೈಲಿ ಉದ್ದ ಹರಿಯುತ್ತದೆ. ಎಂದರೆ ಈಗ ಮೈಸೂರು ಸಂಸ್ಥಾನಕ್ಕೆ ಸೇರತಕ್ಕ ಭಾಗಗಳು ಯಾವ ಯಾವವು ಇವೆಯೋ ಆ ಪ್ರದೇಶದಲ್ಲಿ ಆ ಛಾನಲ್ 107 ಮೈಲಿಗಳಷ್ಟು ಉದ್ದಕ್ಕೆ ಹರಿಯುತ್ತದೆ. ಇದರ ಜೊತೆಗೆ ಒಂದು ಹೈ ಲೆವಲ್ ಛಾನಲ್ ಬೇರೆ ಮಾಡಬೇಕೆಂಬುದಾಗಿ ಒಂದು ಯೋಜನೆಯನ್ನು ಆ ಪ್ರಾಜೆಕ್ಟಿನ ಅಂದಾಜಿನಲ್ಲೇ ಅಡಕಮಾಡಲಾಗಿದೆ. ಹಾಗೆ ಪ್ಲಾನಿನಲ್ಲಿರುವುದನ್ನು ಇನ್ನೂ ಮಾಡಿಲ್ಲ. ಇದನ್ನು ಉತ್ತರೋತ್ತರವಾಗಿ ಮಾಡಬೇಕೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಆಂಧ್ರ ಸರ್ಕಾರಕ್ಕೇ ಆಗಲಿ ಅಥವಾ ಮೈಸೂರು ಸರ್ಕಾರಕ್ಕೇ ಆಗಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇನ್ನು ಮುಂದೆಯೂ ಯಾವ ಭಿನ್ನಾಭಿಪ್ರಾಯಕ್ಕೂ ಅವಕಾಶವಿರುವುದಿಲ್ಲ, ಇದಕ್ಕೆ ಸುಮಾರು 15 ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕಾಗಿ ಬರುತ್ತದೆ. ಇದನ್ನು ಇಂಡಿಯಾ ಸರ್ಕಾರದವರು ಇಂದಿನ ಪಾಂಚವಾರ್ಷಿಕಯೋಜನೆಯಲ್ಲಾಗಲಿ ಅಥವಾ ಮುಂದೆ ಕೈಕೊಳ್ಳಲಿರುವ ಇತರ ಯೋಜನೆಗಳಲ್ಲಿಯಾಗಲಿ ಸೇರಿಸಿ ಮಾಡಲೇಬೇಕಾಗಿರುತ್ತದೆ. ಇದೂ ಅಲ್ಲದೆ ಮಳೆ ಬೆಳೆಗಳು ಕಡಮೆಯಾಗಿ ಡಿಸ್ಟ್ರೆಸ್ ಏರಿಯಾ ಎಂದು ನಾವು ಯಾವುವನ್ನು ಕರೆಯುತ್ತೇವೋ ಅಂಥ ಏರಿಯಾಗಳ ಪೈಕಿ ಕೆಲವಾದ ಚಿತ್ರದುರ್ಗ, ಬಳ್ಳಾರಿ, ಅನಂತಪುರ, ಕಡಪ ಮತ್ತು ಕರ್ನೂಲ್ ಈ ಪ್ರದೇಶಗಳ ಸಹಾಯಾರ್ಥವಾಗಿಯಾದರೂ ಇಂಡಿಯಾ ಸರ್ಕಾರದವರು ಈ ಹೈ-ಲೆವಲ್ ಕೆನಾಲನ್ನು ಮಾಡಿಸಬೇಕಾಗಿ ಬರುತ್ತದೆ. ಆಗ ಮತ್ತಷ್ಟು ಎಕರೆಗಳ ಜಮೀನು ನೀರಾವರಿ ಆಗಿಯೇ ಆಗುತ್ತದೆ. ಅದರ ವಿಸ್ತೀರ್ಣವನ್ನು ನಾನು ಅನಂತರ ತಮಗೆ ತಿಳಿಸುತ್ತೇನೆ. ಈಗ ಆ ರೀತಿಯಾಗಿ ಸುಮಾರು ಒಂದೂವರೆ ಲಕ್ಷ ಎಕರೆಗಳ ಮೇಲೆ ನೀರಾವರಿ ಜಮೀನು ಆ ಪ್ರದೇಶದಲ್ಲಿ ಆಗುವುದರಿಂದ ನಾವೇನು ಈಗ ಈ ಬದಲಾವಣೆಯಿಂದ ನಮಗೆ 30 ಲಕ್ಷ ರೂಪಾಯಿ ನಷ್ಟವಾಗುತ್ತದೆ ಅಥವಾ ಅದರಿಂದ ನಮಗೆ ಬರತಕ್ಕ ಆದಾಯ ಖೋತಾ ಆಗುವ ಪರಿಸ್ಥಿತಿ ಒದಗುತ್ತದೆ ಎಂದು ಹೇಳುತ್ತಿದ್ದೇವೆಯೋ ಅಂಥ ಒಂದು ಪರಿಸ್ಥಿತಿ ನಮಗೆ ಬಹಳ ಕಾಲ ಇರುವುದಿಲ್ಲ. ಆ ಪರಿಸ್ಥಿತಿ ಅತಿ ಬೇಗ ಹೊರಟು ಹೋಗುತ್ತದೆ.

Sri S. SRINIVASA IYENGAR.—What is the liability that the State has to bear on the capital outlay?

Sri K. HANUMANTHAIYA.—All the Members may ask questions and I will once and for all reply. I leave it to your discretion.

Mr. SPEAKER.—Let the mover of the motion make his speech and close it. If any doubts arise or if any information is sought for, it will be supplied to the extent possible.

ಶ್ರೀ ಕೆ. ಹನುಮಂತಯ್ಯ.—ಆದುದರಿಂದ ಸ್ವಾಮಿ, 30 ಲಕ್ಷ ರೂಪಾಯಿಗಳ ಖೋತಾ ಆಗುತ್ತದೆಯೆಂದು ಹೊರಪಟ್ಟಿರುವ ಅಂಶ ನಮ್ಮನ್ನು ಯಾವ ರೀತಿಯಿಂದಲೂ ಬಾಧಿಸಬೇಕಾಗಿಲ್ಲ. ಅದು ನಮ್ಮನ್ನು ಯಾವ ರೀತಿಯಲ್ಲೂ ಹಿಂಜಗ್ಗಿಸಬೇಕಾಗಿಯೂ ಇಲ್ಲ. ಮೊನ್ನೆಯಲ್ಲಿ ಈ ವಿಚಾರ ಚರ್ಚೆಯಾಗುತ್ತಿರುವಾಗ ಈ ಅಭಿಪ್ರಾಯದ ಬಗ್ಗೆ ಒಂದು ಬಹಳ ಸೊಗಸಾದ ಉತ್ತರವನ್ನು ಕೊಟ್ಟಿದ್ದಾರೆ. "ಈಗ ಮೈಸೂರು ಸರ್ಕಾರಕ್ಕೆ ಸುಮಾರು ಒಂದೂವರೆ ಕೋಟಿ ಡಿಫಿಸಿಟ್ ಇದೆ ಎಂದು ಹೇಳಿರುತ್ತೀರಿ. ಹೀಗೆ ಡಿಫಿಸಿಟ್ ಆಗಿರುವ ಮೊಬಲಗನ್ನು ನಮ್ಮ ಈಗಿರತಕ್ಕ 9 ಜಿಲ್ಲೆಗಳಿಗೂ ಸಮವಾಗಿ ಭಾಗಮಾಡಿದರೆ ಪ್ರತಿಯೊಂದು ಜಿಲ್ಲೆಗೂ ಸುಮಾರು 20–30 ಲಕ್ಷ ರೂಪಾಯಿಗಳು ಡಿಫಿಸಿಟ್ ಆದ ಹಾಗೆ ಆಯಿತು. ಇದೇ ರೀತಿಯಾಗಿ ಈಗ ಬಳ್ಳಾರಿಯನ್ನೂ ಒಂದು ಡಿಫಿಸಿಟ್ ಜಿಲ್ಲೆಯನ್ನಾಗಿ ಇಟ್ಟುಕೊಂಡರೂ ಇಟ್ಟುಕೊಳ್ಳಬಹುದು. ಆದುದರಿಂದ ಇದೊಂದು ಅಂಥ ಸಮಂಜಸವಾದವಲ್ಲ" ಎಂದು ಹೇಳಿದ್ದಾರೆ. ಆದರೆ ನಾನೀಗ ಈ ವಿಚಾರವನ್ನು ಸುಮ್ಮನೆ ತಮ್ಮ ಅವಗಾಹನೆಗೆ ತಂದೆ. ನಾನು ಇದನ್ನು ಸಮರ್ಥಿಸಬೇಕೆಂದು ಎದ್ದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೈಸೂರು ಬಡ್ಜೆಟ್ ಸರ್‌ಪ್ಲಸ್ ಬಡ್ಜೆಟ್ಟಾಗಿದೆಯೆಂದು ಮೊನ್ನೆತಾನೆ ಹೇಳಿದಿರಿ.

Sri K. HANUMANTHAIYA.—I would very much like the Hon'ble Member to have some patience.

Sri MULKA GOVINDA REDDY.—We have abundance of patience. It is parliamentary practice, Sir, to interrupt.

Sri K. HANUMANTHAIYA.—If he gets himself irritated, I cannot help it.

Sri MULKA GOVINDA REDDY.—It is he who gets more irritated.

Mr. SPEAKER.—It is a matter of opinion.

ಶ್ರೀ ಕೆ. ಹನುಮಂತಯ್ಯ.—ಆದುದರಿಂದ ಸ್ವಾಮಿ, ನಾವು ಈ ಬಳ್ಳಾರಿ ಮತ್ತು ಇತರ ತಾಲ್ಲೂಕುಗಳನ್ನು ಒಂದು ಆಸ್ತಿಯೆಂದು ಹೇಳಿ ಭಾವಿಸಬಹುದೇ ಹೊರತು ಇದೊಂದು ನಷ್ಟದ ಬಾಬು ಎಂದು ನಾವು ಈಗ ಭಾವಿಸುವ ಹಾಗಿಲ್ಲ. ಈ ತಾಲ್ಲೂಕುಗಳಲ್ಲಿ ಮುಖ್ಯವಾದ ಸಾಂಡೂರ್ ತಾಲ್ಲೂಕಿನಲ್ಲಿ ಖನಿಜ ಸಂಪತ್ತು ಕೂಡ ಬೇಕಾದಷ್ಟಿದೆ; ಕಬ್ಬಿಣದ ಅದಿರು ಇದೆ. ಅಷ್ಟೇ ಅಲ್ಲದೆ ನನಗೆ ಬಂದಿರತಕ್ಕ ಸಮಾಚಾರದ ಪ್ರಕಾರ ಆ ಪ್ರಾಂತದಲ್ಲಿ ಉತ್ತರೋತ್ತರ ಚಿನ್ನ ಕೂಡ ದೊರೆಯುವಂಥ ಅವಕಾಶವಿದೆಯೆಂದು ತಿಳಿದುಬಂದಿದೆ. ಅಲ್ಲಿ ಫಾರೆಸ್ಟ್ ವೆಲ್ತ್ ಕೂಡ ಇದ್ದೇ ಇವೆ. ಹೀಗೆ ಪ್ರಕೃತಿ ಸೌಂದರ್ಯ ನಮ್ಮ ಮೈಸೂರು ಸಂಸ್ಥಾನಕ್ಕೆ ಈಗ ಏನು ದೊರೆತಿದೆಯೋ ಅದೇ ಪ್ರಕೃತಿ ಸೌಂದರ್ಯಗಳು, ಇನ್ನೊಂದು ದೃಷ್ಟಿಯಿಂದ ಇನ್ನೂ ಹೆಚ್ಚಿನ ಪ್ರಮಾಣಗಳಲ್ಲಿ ದೊರೆಯುತ್ತವೆಂದು ಗೊತ್ತಾಗಿದೆ.

ನಾನು ಈಗ ಮತ್ತೊಂದು ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ. ಅದು ಬಳ್ಳಾರಿ ತಾಲ್ಲೂಕಿನ ಪ್ರಶ್ನೆ. ಈ ಬಳ್ಳಾರಿ ತಾಲ್ಲೂಕು ಈಗ ರಚಿತವಾಗುತ್ತಲಿರುವ ಆಂಧ್ರ ಸಂಸ್ಥಾನಕ್ಕೆ ಸೇರಬೇಕೆ ಅಥವಾ ಮೈಸೂರು ಸಂಸ್ಥಾನಕ್ಕೆ ಸೇರಬೇಕೆ ಎಂಬ ಒಂದು ಜಿಜ್ಞಾಸೆ ಹುಟ್ಟಿತು. ಇಂಡಿಯಾ ಸರ್ಕಾರದವರು ಈ ತಾಲ್ಲೂಕಿನ ವಿಚಾರದಲ್ಲಿ ಏನೊಂದು ತೀರ್ಪನ್ನೂ ಕೊಡದೆ ಇದಕ್ಕೆ ಒಂದು ಬೇರೆ ಕಾರ್ಯಕ್ರಮವನ್ನೇ ಅನುಸರಿಸಿದರು. ಅದು ಬಹಳ ಸೂಕ್ತ ಮತ್ತು ಸರಿಯಾದ ಕಾರ್ಯಕ್ರಮ. ಹೈದರಾಬಾದ್ ಹೈಕೋರ್ಟಿನ ಚೀಫ್ ಜಸ್ಟಿಸ್‌ರವರಾದ ಶ್ರೀ ಮಿಶ್ರಾರವರನ್ನು ಈ ಕೆಲಸಕ್ಕೆ ನೇಮಿಸಿದರು. ಅವರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಬಳ್ಳಾರಿ ತಾಲ್ಲೂಕು ಆಂಧ್ರ ಸಂಸ್ಥಾನಕ್ಕೆ ಸೇರಬೇಕೆ ಅಥವಾ ಮೈಸೂರು ಸಂಸ್ಥಾನಕ್ಕೆ ಸೇರಬೇಕೆ ಎನ್ನುವ ವಿಚಾರದಲ್ಲಿ ತೀರ್ಪನ್ನು ಕೊಡಬೇಕೆಂದು ಹೇಳಿದರು. ಅದೇರೀತಿ ಆಜ್ಞೆಮಾಡಿದರು. ಶ್ರೀ ಮಿಶ್ರ ಅವರು ಈ ಕೆಲಸವನ್ನು ಕೈಕೊಂಡರು. ಬಳ್ಳಾರಿಗೆ ಬಂದರು. ಇವರು ಅಲ್ಲಿ ಸಂಬಂಧಪಟ್ಟ ಎಲ್ಲರ ವಾದಗಳನ್ನೂ ಕೇಳಿದರು. ಎಲ್ಲರೂ ಕೊಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸಿದರು. ಮೈಸೂರು ದೇಶದ ಅಭಿಪ್ರಾಯವನ್ನೂ ಸಹ ತೆಗೆದುಕೊಂಡರು. ಈ ರೀತಿಯಾಗಿ ಸಂಬಂಧಪಟ್ಟ ಎಲ್ಲ ಜನರು, ಎಲ್ಲ ಮುಖಂಡರು ತಿಳಿಸಿದ ಅಭಿಪ್ರಾಯ, ಮಾಡಿದ ವಾದ ಮತ್ತು ಕೊಟ್ಟಂಥ ಅಂಕಿ ಅಂಶ ಇತ್ಯಾದಿಗಳೆಲ್ಲವನ್ನೂ ಅವರು ಪರಿಶೀಲನೆಮಾಡಿ ಕೊನೆಗೆ ಒಂದು ಆಖೈರು ತೀರ್ಮಾನಕ್ಕೆ ಬಂದರು. ಹಾಗೆ ಅವರು ಕೊಟ್ಟ ತೀರ್ಮಾನಕ್ಕೆ, ತಮಗೆಲ್ಲರಿಗೂ ಗೊತ್ತಿರುವಹಾಗೆ, "ಮಿಶ್ರ ಅವಾರ್ಡ್" ಎಂದು ಹೆಸರಾಗಿದೆ. ಈ ಅವಾರ್ಡ್ ಪ್ರಕಾರ ಬಳ್ಳಾರಿ ತಾಲ್ಲೂಕು ಮೈಸೂರು ಸಂಸ್ಥಾನಕ್ಕೆ ಸೇರತಕ್ಕದ್ದೇ ಸರ್ವ ವಿಧದಲ್ಲೂ ಸೂಕ್ತವಾದುದೆಂದು ಆ ಅವಾರ್ಡಿನಲ್ಲಿ ತಿಳಿಸಿದ್ದಾರೆ. ಮಿಶ್ರರವರು ಅವರ ಅವಾರ್ಡನ್ನು ಇಂಡಿಯಾ ಸರ್ಕಾರಕ್ಕೆ ಒಪ್ಪಿಸಿದ ಮಾರನೆಯ ದಿನವೇ ಇಂಡಿಯಾ ಸರ್ಕಾರದವರು ಒಂದು ತೀರ್ಮಾನವನ್ನು ಕೈಕೊಂಡರು. ಅದು ಶ್ರೀ ಮಿಶ್ರ ಅವರ ಅವಾರ್ಡ್ ಸರಿಯಾಗಿದೆ ಎಂಬುದೇ ಆಗಿದೆ. ಆದರೆ ಇಂಡಿಯಾ ಸರ್ಕಾರದವರು ಮಿಶ್ರರವರ ಅವಾರ್ಡ್‌ನಲ್ಲಿ ಹೇಳಿರತಕ್ಕ ಪ್ರತಿಯೊಂದು ಅಂಶವನ್ನೂ ಒಂದೊಂದನ್ನಾಗಿ ಪರಿಶೀಲನೆಗೆ ತೆಗೆದುಕೊಳ್ಳದೆ, ಒಂದೇ ಒಂದು ದಿನದಲ್ಲಿ ಆ ಅವಾರ್ಡ್ ಸರಿಯಾಗಿದೆಯೆಂದು ಒಪ್ಪಿಕೊಂಡಿರತಕ್ಕದು ಒಂದು ಒಳ್ಳೆಯ ಸಂಗತಿ. ಏಕೆಂದರೆ ಆಗ ಬಳ್ಳಾರಿ ತಾಲ್ಲೂಕಿನಲ್ಲಿ ಕೆಲವರು ಉದ್ರೇಕ ಪರಿಸ್ಥಿತಿಯನ್ನುಂಟುಮಾಡಿದರು, ಮತ್ತೆ ಕೆಲವರು ದೌರ್ಜನ್ಯ ಕೃತ್ಯಗಳಲ್ಲಿ ಕೈಹಾಕಿದರು, ಇನ್ನು ಕೆಲವರು ಅಶಾಂತಿಯನ್ನೆಬ್ಬಿಸುವುದಕ್ಕೆ ಕಾದಿದ್ದರು. ಈ ದೃಷ್ಟಿಯಿಂದ ಎಷ್ಟು ಕಾಲಹರಣ ಮಾಡಿದರೆ ಅಷ್ಟೂ ಪರಿಸ್ಥಿತಿ ಉಲ್ಬಣಾವಸ್ಥೆಗೆ ಏರುತ್ತಾ ಹೋಗುತ್ತದೆಂದೂ, ಇದನ್ನು ಆದಷ್ಟು ಜಾಗ್ರತೆ ಶಮನ ಮಾಡುವುದು ಸರ್ಕಾರದವರ ಕರ್ತವ್ಯವೆಂದೂ ಭಾವಿಸಿ ಅವರು ಇದನ್ನು ಅಷ್ಟು ಶೀಘ್ರವಾಗಿ ಮಾಡಿರಬೇಕೆಂದು ನಾನು ಭಾವಿಸುತ್ತೇನೆ. ಯಾವ ಪ್ರಶ್ನೆಯೇ ಆಗಲಿ: ವಿಳಂಬವಾದಷ್ಟೂ ಅದರಿಂದ ವ್ಯಾಜ್ಯಕ್ಕೆ ಕಾರಣವಾಗುತ್ತದೆ. ಸಿವಿಲ್ ಲಿಟಿಗೇಷನ್‌ಗಳಿಗೆ ಈ ಕಾರಣ ಹೆಚ್ಚಾಗಿ ಅನ್ವಯಿಸುತ್ತದೆ. ಇದು ಎಷ್ಟು ದಿನ ಎಳೆದಾಡಿದರೆ ಅಷ್ಟೂ ತೊಂದರೆಗಳೂ, ಖರ್ಚೂ ಮತ್ತು ಇತರ ಕಷ್ಟಕಾರ್ಪಣ್ಯಗಳೂ ಜಾಸ್ತಿಯಾಗುಯಾಗುತ್ತವೆಯೆಂಬ ಈ ನಾನಾ ಕಾರಣಗಳಿಂದ ಇಂಡಿಯಾ ಸರ್ಕಾರದವರು ಇದನ್ನು ಕಾಲ ವಿಳಂಬ ಮಾಡದೆ ಅತಿ ಶೀಘ್ರವಾಗಿ ಒಪ್ಪಿಕೊಂಡಿದ್ದರಲ್ಲಿ ಬುದ್ಧಿವಂತಿಕೆಯಿದೆ ಮತ್ತು ಇದು ದೇಶಕ್ಕೆ ಒಳ್ಳೆಯದಾಗಬೇಕೆಂಬ ಸದ್ಭಾವನೆಯಿಂದ ಕೂಡಿದ್ದಾಗಿದೆ. ಈ ದೃಷ್ಟಿಯಿಂದ ಕೂಡ ನಾವು ಈಗ ಇದನ್ನು ಪರಿಶೀಲನೆ ಮಾಡುವುದಾದರೆ ಮಿಶ್ರರವರ ಅವಾರ್ಡನ್ನು ಪುನಃ ಪರಿಶೀಲನೆ ಮಾಡುವುದರಿಂದ ಒಳ್ಳೆಯದೇನೂ ಆಗುವುದಿಲ್ಲ. ಹಾಗೆ ಮಾಡುವುದರಿಂದ ವ್ಯಾಜ್ಯವಾಡಿ ಸುಸ್ತಾಗಿ ಕುಳಿತುಕೊಂಡಿರತಕ್ಕಂಥವರಿಗೆ ಪುನಃ ಈ ಚರ್ಚೆಗಳು ಒಂದು ಪುರಸ್ಕಾರ ಕೊಟ್ಟಹಾಗಾಗುತ್ತದೆ. ಮಿಶ್ರರವರ ಅವಾರ್ಡನ್ನು ಈಗ ನಿರ್ಮಿತವಾಗಬೇಕೆಂದಿರುವ ಬೌಂಡರಿ ಕಮಿಷನ್ನಿಗೆ ಹಾಕಬೇಕೆಂದು ಹೇಳುವುದಾದರೆ ಆಗ ಇದಕ್ಕಾಗಿಯೇ ಕಾದಿರತಕ್ಕ ಸಂಬಂಧಪಟ್ಟ ಜನಗಳು ಪುನಃ ಚಳವಳಿ ಹೂಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹಿಂದೆ ಏನೇನು ದೌರ್ಜನ್ಯ ಕೃತ್ಯಗಳು ನಡೆದಿದ್ದವೋ ಅವುಗಳು ಪುನಃ ಪ್ರಾರಂಭವಾಗಲು ಅವಕಾಶವಾಗಬಹುದು. ಆದ್ದರಿಂದ ಈ ಬಳ್ಳಾರಿ ಪ್ರಶ್ನೆಯನ್ನು ಪುನಃ ಪರಿಶೀಲನೆ ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದು ನ್ಯಾಯವಲ್ಲ ಮತ್ತು ಸೂಕ್ತವಾದದೂ ಅಲ್ಲ ಎಂದು ನಮ್ಮಗಳ ಖಚಿತವಾದ ಅಭಿಪ್ರಾಯ.

ಈ ಅಭಿಪ್ರಾಯವನ್ನು ಸಮರ್ಥಿಸಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನವರು ಒಂದು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದ್ದಾರೆ. ಅದೇ ತೆರದ ನಿರ್ಣಯವನ್ನು ಈ ಸಭೆಯ ಮುಂದೆಯೂ ನಾನು ಮಂಡಿಸುತ್ತೇನೆ. ಅದಕ್ಕೆ ತಮ್ಮ ಒಪ್ಪಿಗೆ ದೊರತೇ ದೊರಕುತ್ತದೆಂದು ನಂಬಿದ್ದೇನೆ. ಎಲ್ಲಾ ವಿಷಯುಗಳನ್ನೂ ವಾದಿಸಿ ಒಂದು ತೀರ್ಪು ಆದಮೇಲೆ ಆ ತೀರ್ಪು ಸರಿಯಾಗಿಲ್ಲ. ಇನ್ನೊಂದು ಟ್ರಿಬ್ಯುನಲ್ಲಿಗೋ ಅಥವಾ ಕಮಿಷನ್ನಿಗೋ ಪುನಃ ಪರಿಶೀಲನೆಗೆ ಬಿಡಬೇಕೆಂದರೆ

ಅದು ನ್ಯಾಯ ವಿನಿಮಯ ಸಂಪ್ರದಾಯಕ್ಕೆ ಸರ್ವವಿಧದಲ್ಲೂ ವ್ಯತಿರಿಕ್ತವಾಗುತ್ತದೆ. ಇದರಿಂದ ದೇಶದಲ್ಲಿ ನ್ಯಾಯ ವಿನಿಮಯ ಮಾರ್ಗದಲ್ಲೇ ನಂಬಿಕೆ ಹೊರಟು ಹೋಗುತ್ತದೆ. ಅದರ ಜೊತೆಗೆ, ನಾನು ಮೊದಲೇ ಹೇಳಿದಹಾಗೆ, ಏನೇನು ದೌರ್ಜನ್ಯಕೃತ್ಯಗಳು ಆದುವೋ ಯಾವ ಕಹಿ ವಾತಾವರಣ ಉಂಟಾಯಿತೋ ಅವು ಪುನಃ ಪುನಃ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಮೈಸೂರು ಸರ್ಕಾರದ ಉಚಿತ ಅಭಿಪ್ರಾಯವೇನೆಂದರೆ, ಮಿಶ್ರಾ ಅವಾರ್ಡ್ ಎಂದು ಯಾವ ತೀರ್ಮಾನ ಈಗ ಆಗಿದೆಯೋ ಅದೇ ಕೊನೆಯ ಅಭಿಪ್ರಾಯವಾಗಬೇಕು, ಅದು ಯಾವ ವಿಧದಲ್ಲೂ ಪುನರ್ವಿಮರ್ಶೆಗೆ ಬರಕೂಡದು ಎಂಬುದು.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಬಹಿರಂಗವಾಗಿ ನಾನು ಪ್ರಸ್ತಾಪಮಾಡುವುದು ಅನಿವಾರ್ಯವಾಗಿ ಬಂದಿದೆ. ಬಳ್ಳಾರಿ ತಾಲ್ಲೂಕಿನಲ್ಲಿ ಪಾಲಿಟೆಕ್ನಿಕ್ ಎಂದು ಒಂದು ಸಂಸ್ಥೆಯಿದೆ. ಆ ಸಂಸ್ಥೆಯಲ್ಲಿರತಕ್ಕ ಯಂತ್ರಸಾಮಾಗ್ರಿಗಳನ್ನು ಅಲ್ಲಿಂದ ಆಂಧ್ರ ಡಿಸ್ಟ್ರಿಕ್ಟಿನಲ್ಲಿರುವ ಮುಸಲೀಪಟ್ಟಣಕ್ಕೆ ಸಾಗಿಸುತ್ತಿದ್ದಾರೆಂಬ ವರದಿ ಬಂದಿದೆ. ಈ ವಿಷಯವಾಗಿ, ಅವರು ಈ ರೀತಿ ಮಾಡಬಾರದು ಎಂದು ನಾನು ಮದ್ರಾಸ್ ಸರ್ಕಾರದ ಮುಖ್ಯಮಂತ್ರಿಗಳಲ್ಲಿ ಮನವಿಮಾಡಿಕೊಂಡಿದ್ದೇನೆ ; ಹಾಗೆಯೇ ಇಂಡಿಯಾ ಸರ್ಕಾರದವರಿಗೂ ಕೂಡ ತಿಳಿಸಬೇಕಾಗಿದೆ. ಈಗ ನಮ್ಮ ಮುಂದಿರುವ ಬಿಲ್ಲಿನಲ್ಲಿಯೂ ಕೂಡ ಯಾವ ಯಾವ ಪ್ರಾಂತದಲ್ಲಿ, ಯಾವ ಯಾವ ತಾಲ್ಲೂಕುಗಳಲ್ಲಿ ಅಥವಾ ಡಿಸ್ಟ್ರಿಕ್ಟ್‌ಗಳಲ್ಲಿ ಏನೇನು ಆಸ್ತಿಗಳಿವೆಯೋ ಅವೆಲ್ಲಾ ಅಲ್ಲೇ ಇರಬೇಕೆಂಬ ಒಂದು ವಿಧಿ ಇದೆ. ಅಲ್ಲದೆ, ಈ ಆಂಧ್ರ ಬಿಲ್ಲು ಮದ್ರಾಸ್ ಸರ್ಕಾರದವರೂ ಮತ್ತು ಮೈಸೂರು ಸರ್ಕಾರದವರೂ ತಮ್ಮ ಅಭಿಪ್ರಾಯವನ್ನು ತಿಳಿಸಿದಮೇಲೆ ರೂಪಿಸಲ್ಪಟ್ಟಿರುವ ಮಸೂದೆ. ಹೀಗಿದ್ದರೂ ಕೂಡ ಈ ಆಸ್ತಿಗಳನ್ನು, ಅವು ಎಲ್ಲೇ ಇರಲಿ, ಅವನ್ನು ವರ್ಗಮಾಡುವುದಕ್ಕೆ ಪ್ರಯತ್ನಪಟ್ಟರೆ, ಅದು ಈ ಬಿಲ್ಲಿನ ವಿಧಿಗಳಿಗೆ ಅನುಗುಣವಾಗಿರುವುದಿಲ್ಲ. ಸರ್ಕಾರಗಳು ಪರಸ್ಪರವಾಗಿ ಯಾವ ರೀತಿ ಸೌಹಾರ್ದದಿಂದ, ಸಹಕಾರದಿಂದ ವರ್ತಿಸಬೇಕೋ ಆ ದೃಷ್ಟಿಯಿಂದ ಇದು ಸರಿಯಾಗಿ ಕಾಣುವುದಿಲ್ಲ. ಆದುದರಿಂದ ಮದ್ರಾಸ್ ಸರ್ಕಾರದವರಿಗೆ ಈ ಸಭೆಯ ಪರವಾಗಿ ಮತ್ತೊಂದು ಸಾರಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಈ ರೀತಿಯಾಗಿ ಆಸ್ತಿಪಾಸ್ತಿಗಳನ್ನು ಅಕ್ರಮವಾಗಿ ವರ್ಗಮಾಡುವುದಕ್ಕೆ ಪ್ರವೇಶಮಾಡಬಾರದು. ಒಂದುವೇಳೆ ಪ್ರಯತ್ನಮಾಡಿದ್ದರೆ, ಹಾಗೆ ತೆಗೆದುಕೊಂಡುಹೋಗಿರುವುದನ್ನು ಮತ್ತೆ ತಂದು ಅಲ್ಲೇ ಇರಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ನಾನು ಇಷ್ಟು ವಿಷಯಗಳನ್ನು ಹೇಳಿದ್ದೇನೆ. ಈ ವಿಷಯದಲ್ಲಿ ಈ ಸಭೆಯಲ್ಲಿ ವಿಪುಲವಾದ ಚರ್ಚೆ ಆಗತಕ್ಕದ್ದಿದೆ. ಅನೇಕ ಮಾನ್ಯ ಸದಸ್ಯರು ಅನುಮಾನಗಳನ್ನು ನಿವಾರಿಸಬೇಕೆಂದು ಕೇಳಬಹುದು, ಪ್ರಶ್ನೆಗಳನ್ನು ಕೇಳಬಹುದು, ವಿವರಗಳನ್ನು ಕೇಳಬಹುದು. ಅವರು ಏನು ಅನುಮಾನಗಳನ್ನು ವ್ಯಕ್ತಪಡಿಸುತ್ತಾರೋ ಯಾವ ಪ್ರಶ್ನೆಗಳನ್ನು ಕೇಳುತ್ತಾರೋ ಅಥವಾ ವಿವರಗಳನ್ನು ಅಪೇಕ್ಷಿಸುತ್ತಾರೋ ಅವುಗಳಿಗೆಲ್ಲಾ ಸೂಕ್ತ ಉತ್ತರವನ್ನು ನನ್ನ Reply Speechನಲ್ಲಿ ತಿಳಿಸುತ್ತೇನೆ.

ಶ್ರೀ ಎಂ. ವಿ. ರಾಮರಾವ್.—ಪಾಲಿಟೆಕ್ನಿಕ್ ಇನ್ಸ್ಟಿಟ್ಯೂಟಿನ ಕಟ್ಟಡ ಬಳ್ಳಾರಿಯಲ್ಲೇ ಇದೆಯಲ್ಲವೇ ; ಅದರಲ್ಲಿರುವ ಸಲಕರಣೆಗಳು ಮಾತ್ರ ಬೇರೆ ಕಡೆಗೆ ಸಾಗುತ್ತಿವೆಯಲ್ಲವೇ ?

Sri MULKA GOVINDA REDDY.—I take strong objection to the use of a word by the Chief Minister in his speech. He said ಈ ಬಿಲ್ಲಿನ ಮೇಲೆ ವಿಫಲವಾದ ಚರ್ಚೆ ನಡೆಯುತ್ತಿದೆ ಎಂದು. That means useless debate.

SOME HON'BLE MEMBERS.—No, no. He did not say so. He said "ವಿಪುಲವಾದ ಚರ್ಚೆ".

Sri MULKA GOVINDA REDDY.—I want certain information regarding Bellary. How many schools there are per thousand per square mile in Bellary, how many roads there are per thousand population per square mile, what are the irrigational and other facilities in Bellary District in these seven taluks in comparison with Chitaldrug District and so on. Next regarding Tungabhadra project, what is the amount invested so far by the Government of Madras......

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಷಯಗಳೆಲ್ಲವನ್ನೂ ತಾವು ಭಾಷಣ ಮಾಡುವಾಗಲೇ ಪ್ರಸ್ತಾಪಿಸಬಹುದು. ಹಾಗಿಲ್ಲದೆ ಒಬ್ಬೊಬ್ಬರೂ ಈ ರೀತಿ ಪ್ರಶ್ನೆಗಳನ್ನು ಕೇಳುವುದಕ್ಕೆ ಪ್ರಾರಂಭಿಸಿದರೆ ಎಲ್ಲರಿಗೂ ಉತ್ತರ ಹೇಳಬೇಕೆಂದರೆ ಬಹಳ ಕಷ್ಟವಾಗುತ್ತದೆ.

Sri MULKA GOVINDA REDDY.—How much is to be borne by the Government of Mysore and by the Government of Andhra that is to come into existence and what is the acreage under the low level channel, that is, how much wet out of 90,000 acres and how much dry and how much power is going to be diverted when the hydro-electric project comes into existence and how much is to be invested by the Government of Mysore and also by the Government of Andhra, and how much is to be shared by the Government of Mysore when the high level channel is to be undertaken—these points may be clarified so that we may approach the problem with facts and figures on hand.

Sri D. DEVARAJ URS.—In addition to the information already sought for by my friend, Sri Mulka Govinda Reddy, I should like to have information on two other points, *viz.*, the annual rainfall in the District.

Sri K. HANUMANTHAIYA.—About 22-24 inches.

Sri D. DEVARAJ URS.—And the number of schools. If information on these points is given, I think it would facilitate discussion.

Sri K. HANUMANTHAIYA.—I will furnish all that information. Sir, these are the figures:—

1	Revenue of these 7 Taluks.	83 lakhs
2	Expenditure about	114 lakhs
3	Density of population per sq. mile.	206 per sq. mile.
4	No. of miles of road inclusive of Government and Provincial Highways, Major District Board roads and other roads.	756 miles
5	Schools (both Secondary and Primary).	533
6	The average population served by each school.	1,451
7	No. of Hospitals (inclusive of Local Fund and District Board Hospitals).	17
8	The population which each hospital serves on the average.	45,512
9	No. of Veterinary Hospitals.	4
10	No. of cattle as per figures available.	4,80,000
11	ತುಂಗಭದ್ರಾ ಪ್ರಾಜೆಕ್ಟಿನ low level ನಾಲೆಯಲ್ಲಿ ಮೈಸೂರು ಪ್ರಾಂತಕ್ಕೆ ಸೇರತಕ್ಕದು.	107 ಮೈಲಿಗಳು
12	ತುಂಗಭದ್ರಾಪ್ರಾಜೆಕ್ಟಿನಲ್ಲಿ low level ನಾಲೆಯಲ್ಲಿ ಆಂಧ್ರಪ್ರಾಂತಕ್ಕೆ ಸೇರತಕ್ಕದು	118 ಮೈಲಿಗಳು
13	ಇದೇ low level canal ಕೆಳಗೆ ಮೈಸೂರು ದೇಶಕ್ಕೆ ಸೇರತಕ್ಕ ಜಮೀನು. (ಸ್ಕೀಮು ಮೊದಲು ಆದಾಗ ತೆಗೆದ ಅಂಕಿ ಅಂಶ ಪ್ರಕಾರ.)	92,000 ಎಕರೆಗಳು.
14	ಇದೇ low level canal ಆಂಧ್ರ ಪ್ರಾಂತಕ್ಕೆ 1,58,000 ಎಕರೆ ಸೇರತಕ್ಕ ಜಮೀನು.	

ಮೈಸೂರು ಸರ್ಕಾರದವರೂ ಹೈದರಾಬಾದು ಸರ್ಕಾರದವರೂ ಮತ್ತು ಮದ್ರಾಸು ಸರ್ಕಾರದವರೂ ಸೇರಿ ಕೊನೆಗೆ ಆಖೈರಾಗಿ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆಮೇಲೆ High level canal ಎನ್ನುವುದು 160 ಮೈಲಿಗಳಾಗುತ್ತದೆ. ಇನ್ನೂ ಅದು ಆಗಿಲ್ಲ. ಅಷ್ಟು ದೂರ ಹೋಗುತ್ತದೆ. ಇದರ ಬಗ್ಗೆ ಸುಮಾರಾಗಿ 15 ಕೋಟಿ ರೂಪಾಯಿಗಳು ಖರ್ಚಾಗಬಹುದು, ಇದರಿಂದಾಗಿ ಎರಡು ಲಕ್ಷ ಎಕರೆಗಳು ನೀರಾವರಿಗೆ ಬರುತ್ತವೆ. ಈ ಎರಡು ಲಕ್ಷ ಎಕರೆಗಳ ಪೈಕಿ ಅರ್ಧ ಭಾಗ ಮೈಸೂರು ಪ್ರಾಂತಕ್ಕೆ ಸೇರುತ್ತದೆ, ಮಿಕ್ಕರ್ಧ ಆಂಧ್ರಪ್ರಾಂತಕ್ಕೆ ಸೇರುತ್ತದೆ.

Mr. SPEAKER.—It is stated in one of the reports that this is 1,14,000 acres.

ಶ್ರೀ ಕೆ. ಹನುಮಂತಯ್ಯ.—ಅದಕ್ಕೇ, ನಾನು ಹೆಚ್ಚು ಕಡಮೆ ಅರ್ಧ-ಅರ್ಧ ಎಂದು ಹೇಳಿದೆ. ಈ ಪ್ರಾಜೆಕ್ಟಿಗಾಗಿ ಒಟ್ಟು ಮೈಸೂರು, ಹೈದರಾಬಾದ್ ಮತ್ತು ಮದ್ರಾಸ್ ಸರ್ಕಾರಗಳು ಖರ್ಚು ಮಾಡಬೇಕೆಂದಿರತಕ್ಕದ್ದು ಸುಮಾರು 51 ಕೋಟಿ ರೂಪಾಯಿಗಳು.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಈ information ಎಲ್ಲವನ್ನೂ ಅಚ್ಚು ಹಾಕಿಸಿ ಕೊಟ್ಟರೆ ಅನುಕೂಲ. ಇಲ್ಲದಿದ್ದರೆ ಈಗ ನಾವು ಬರೆದುಕೊಳ್ಳುತ್ತಿರುವ ಹಾಗಾಗುತ್ತದೆ.

10-30 A.M.

ಶ್ರೀ ಕೆ. ಹನುಮಂತಯ್ಯ.—ಈಗ ನಾನು ಹೇಳಿದ ಅಂಕಿ ಅಂಶಗಳು ಮಾನ್ಯ ಸದಸ್ಯರಿಗೆ ಪುನಃ ಬೇಕೆಂದರೆ, ಸೈಕ್ಲೋಸ್ಟೈಲ್ ಮಾಡಿಸಿಕೊಡುತ್ತೇನೆ. ಮುದ್ರಣ ಮಾಡಿಸಿದರೂ ಒಂದೇ ಸೈಕ್ಲೋಸ್ಟೈಲ್ ಮಾಡಿಸಿದರೂ ಒಂದೇ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ವ್ಯತ್ಯಾಸವಿದೆ. ಸೈಕ್ಲೋಸ್ಟೈಲ್ ಮಾಡಿದರೆ, ಕೆಲವು ಕಾಣುತ್ತವೆ, ಕೆಲವು ಕಾಣುವುದಿಲ್ಲ.

ಶ್ರೀ ಕೆ. ಹನುಮಂತಯ್ಯ.—ಮುದ್ರಣ ಮಾಡಿಸಲು ಒಂದು ಕಷ್ಟವಿದೆ; ಮುದ್ರಣಾಲಯದಲ್ಲಿ ಈಗ ಎಷ್ಟು ಕೆಲಸವಿರುತ್ತದೆಂದು ತಮಗೆ ಗೊತ್ತಿದೆ. ಆದರೂ ಮುದ್ರಣ ಮಾಡಿಸಿಕೊಡುತ್ತೇವೆ.

Mr. SPEAKER.—It is better you get them printed.

Sri K. HANUMANTHAIYA.—The Speaker has advised me to get them printed and I will do so. ಈ ವಿಷಯವನ್ನೆಲ್ಲಾ ಮೊದಲೇ ಅವರು ತಿಳಿದುಕೊಂಡಿದ್ದಾರೆಂಬ ಭಾವನೆ ಮೊದಲು ನನ್ನಲ್ಲಿತ್ತು......

Mr. SPEAKER.—I was also under the impression that at least some of the Hon'ble Members knew these things already, including the Leader of the Opposition.

ಶ್ರೀ ಜೆ. ಮಹಮ್ಮದ್ ಇಮಾಂ.—ನಾನೇ ಆಗಿದ್ದರೆ ಇಂಥ ವಿಷಯಗಳು ಬರುತ್ತವೆಂದು ಮೊದಲೇ ನಿರೀಕ್ಷಣೆ ಮಾಡಿ, ಮೊದಲೇ ಮುದ್ರಣ ಮಾಡಿಸುತ್ತಿದ್ದೆ.

ಶ್ರೀ ಕೆ. ಹನುಮಂತಯ್ಯ.—ನಾನೇ ಆಗಿದ್ದರೆ ಮಾಡಿಸುತ್ತಿದ್ದೆ ಎಂದು ಹೇಳುತ್ತಾರೆ; ಅವರು ಅವರೇ ಆಗಿದ್ದಾರೆ. (ನಗು!) He is not different from what he is.

ಮದರಾಸು ಸರ್ಕಾರದವರು ಖರ್ಚು ಮಾಡಬೇಕಾದ ಮೊಬಲಗು 19 ಕೋಟಿ 70 ಲಕ್ಷ ರೂಪಾಯಿಗಳಾಗುತ್ತವೆಂದು ಅಂದಾಜು ಮಾಡಲಾಗಿದೆ. ಇದುವರೆಗೆ ಅದಕ್ಕೆ ಸುಮಾರು 15 ಕೋಟಿ 44 ಲಕ್ಷ ರೂಪಾಯಿಗಳು ಖರ್ಚಾಗಿವೆ. ಅಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡತಕ್ಕ ಎರಡು ಸ್ಥಳಗಳಿವೆ. ಒಂದು ಆ ಕಟ್ಟೆಯ ಹತ್ತಿರ ಜನರೇಟಿಂಗ್ ಸ್ಟೇಷನ್ ಏರ್ಪಾಡು ಮಾಡಬೇಕಾದದ್ದು. ಇನ್ನೊಂದು 16 ಮೈಲಿ ಆದಮೇಲೆ ಅಲ್ಲಿ ನೀರು ‘ಲೋ ಲೆವಲ್ ಕೆನಾಲ್’ಗೆ ಹೋಗುತ್ತದೆ. 116 ಅಡಿ ಟೆರೇಸ್ ಸಿಕ್ಕುತ್ತದೆ; ನೀರು ಧುಮುಕುತ್ತದೆ. ಅಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡತಕ್ಕದ್ದು. ಈಗ ಸದ್ಯಕ್ಕೆ ಕಟ್ಟೆಯ ಹತ್ತಿರದ ಜನರೇಟಿಂಗ್ ಸ್ಟೇಷನ್ನಿಗೆ ಯಂತ್ರಗಳು ಏನೇನು ಬೇಕೋ ಅವಕ್ಕೆ ಮದ್ರಾಸು ಸರ್ಕಾರದವರು ಆಗಲೇ ಆರ್ಡರ್ ಕೊಟ್ಟಿದ್ದಾರೆ. ಇದಕ್ಕೆ 7 ಕೋಟಿ 94 ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಅಂದಾಜಾಗಿದೆ. ಮಿಕ್ಕ ವಿವರಗಳನ್ನು ಶ್ರೀ ಪುಟ್ಟಸ್ವಾಮಿಯವರು ಹೇಳಿದ ಹಾಗೆ, ಅಚ್ಚು ಹಾಕಿಸಿಕೊಡುತ್ತೇನೆ.

ಶ್ರೀ ಎಸ್. ಎಂ. ಮರಿಯಪ್ಪ (ಪಿರಿಯಾಪಟ್ಣ).—ಆಹಾರ ಉತ್ಪತ್ತಿಯ ವಿಷಯ ಹೇಗೆ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೆ ದೇವೇಂದ್ರನ ದಯೆಯಿದ್ದರೆ, ಮಳೆ ಚೆನ್ನಾಗಿ ಆದರೆ ಆಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು–ದಕ್ಷಿಣ).–ಹೊಸಪೇಟೆ ನಮಗೆ ಸೇರುತ್ತದೆಯೆ?

ಶ್ರೀ ಕೆ. ಹನುಮಂತಯ್ಯ.—ಹೌದು.

Sri M. PALANIYAPPAN (Ulsoor).—I want to know the number of Municipalities that are in that area and the policy of Prohibition that the present Government will follow in that area. Are you going to continue the present policy?

Sri K. HANUMANTHAIYA.—I will definitely answer that question. ಬಳ್ಳಾರಿ ಜಿಲ್ಲೆ ಪಾನನಿರೋಧ ಜಾರಿಯಲ್ಲಿರುವ ಜಿಲ್ಲೆಯಾಗಿದೆ. ಅದನ್ನು ನಾವು ಬದಲಾಯಿಸುವುದಕ್ಕಾಗುವುದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟಿನಿಂದ ಯಂತ್ರೋಪಕರಣಗಳನ್ನು ತೆಗೆದುಕೊಂಡು ಹೋದರೆಂದು ಹೇಳುತ್ತಾರೆ. ಹಾಗೆ ಮಾಡಿದ್ದು ಮದರಾಸು ಸರ್ಕಾರದ ಆಜ್ಞೆಯ ಪ್ರಕಾರವೋ ಅಥವಾ ಇಂಡಿಯಾ ಸರ್ಕಾರದ ಆಜ್ಞೆಯ ಪ್ರಕಾರವೋ ಅಥವಾ ಬಗರ್ ಹುಕುಂ ಮೇಲೆ ತೆಗೆದುಕೊಂಡು ಹೋದರೋ!

Sri K. HANUMANTHAIYA.—I am not in a position to reply specifically to that question. It is not wise for us to make allegations against any Government.

Sri J. MOHAMED IMAM.—You said that you were in correspondence with the Chief Minister of Madras. Has the Government of Madras permitted the transfer of the machinery of that institution?

Sri K. HANUMANTHAIYA.—Await their reply.

Sri J. MOHAMED IMAM.—Have the Government of Mysore taken proper precautions to know that such and such machinery is removed?

Sri K. HANUMANTHAIYA.—My friend need not have any apprehensions. The people on the spot will be more alert on this question than any other people.

Sri J. MOHAMED IMAM.—Have they prepared any list of assets and liabilities, any inventory?

‘ಅಸೆಟ್ಸ್’ ಎಷ್ಟು, ‘ಲಯಬಿಲಿಟಿ’ ಎಷ್ಟು, ರೆಸಿಡ್ಯುಯರಿ ಸ್ಟೇಟ್‌ನಲ್ಲಿ ಎಷ್ಟಿದೆ, ಆಂಧ್ರಸ್ಟೇಟ್‌ನಲ್ಲಿ ಎಷ್ಟಿದೆ?

Have you received a list of assets and liabilities? Because it is very important when we consider apportionment. Have our Government taken care to prepare a list of assets and liabilities?

ಎರಡನೆಯದಾಗಿ, ಏಳನೆಯ ಷೆಡ್ಯೂಲಿನಲ್ಲಿ ಒಂದು ತಃಖ್ತೆ ಇದೆ; ಅದರ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು?

Mr. SPEAKER.—At this stage, it is merely a general discussion. We shall now rise for lunch and reassemble again at Ten Minutes past Eleven of the Clock.

The House adjourned for Lunch at Forty Minutes past Ten of the Clock and reassembled at Ten Minutes past Eleven of the Clock.

[Mr. SPEAKER in the Chair.]

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಸಭೆಯ ಮುಂದಿರತಕ್ಕ ಆಂಧ್ರ ಸ್ಟೇಟ್ ಬಿಲ್ ಅಥವಾ ಆಂಧ್ರ ರಾಜ್ಯದ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ಅಂಶಗಳನ್ನು ಸೂಚಿಸಲು ಅಪೇಕ್ಷೆಪಡುತ್ತೇನೆ. ಬಳ್ಳಾರಿ ತಾಲ್ಲೂಕು ಸೇರಿ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನು ಮೈಸೂರು ಸಂಸ್ಥಾನದ ಆಡಳಿತಕ್ಕೊಳಪಡಿಸುವ ಆವಶ್ಯಕತೆ ಕಂಡುಬಂದು ಆ ಸಂಬಂಧ ಕೆಲವು ವಿವರಗಳು ಈ ಮಸೂದೆಯಲ್ಲಿ ನಮೂದಾಗಿವೆ. ಇಂಡಿಯಾ ಸರ್ಕಾರದವರು ಈ ಏಳು ತಾಲ್ಲೂಕುಗಳನ್ನು ಮೈಸೂರು ಸರ್ಕಾರದ ಆಡಳಿತಕ್ಕೊಳಪಡಿಸಬೇಕೆಂಬ ಬಗ್ಗೆ ಮಸೂದೆಯನ್ನು ಪಾರ್ಲಿಮೆಂಟಿನ ಮುಂದೆ ತರುವವರಾಗಿದ್ದಾರೆ. ಈ ಮಧ್ಯೆ ಸಂಬಂಧಪಟ್ಟ ಸರ್ಕಾರಗಳ ಮತ್ತು ಶಾಸನ ಸಭೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಮಸೂದೆಯ ಒಂದು ಪ್ರತಿಯನ್ನು ನಮಗೆ ಕಳುಹಿಸಿದ್ದಾರೆ; ಅದು ಈ ಸಭೆಯ ಮುಂದಿದೆ. ಈ ಸಂದರ್ಭದಲ್ಲಿ ಸಾಮಾನ್ಯವಾಗಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತಾ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕು

(ಶ್ರೀ ಎಚ್. ಕೆ. ವೀರಣ್ಣಗೌಡ.)

ಗಳ ಜನರು ಮೈಸೂರು ಸಂಸ್ಥಾನದ ಸರ್ಕಾರದ ಆಡಳಿತಕ್ಕೆ ಬರುವ ವಿಚಾರದಲ್ಲಿ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೇನೆ. ಹೀಗೆ ಹೇಳುವಾಗ, ಮೈಸೂರು ಸಂಸ್ಥಾನದ ಸರ್ಕಾರದ ಆಡಳಿತಕ್ಕೆ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಒಳಪಡುವುದರಿಂದ ಮೈಸೂರು ವಿಸ್ತಾರದಲ್ಲಿ ಹೆಚ್ಚಾಗುತ್ತದೆ ಎಂಬುದಾಗಲಿ ಅಥವಾ ಬಳ್ಳಾರಿ ಜಿಲ್ಲೆಯ ಬಹುಭಾಗ ಹಿಂದೆ ಯಾವಾಗಲೋ ಮೈಸೂರು ಸಂಸ್ಥಾನದ ಆಡಳಿತಕ್ಕೊಳಪಟ್ಟಿತ್ತು, ಅದು ನಮಗೆ ಬರುವುದು ನ್ಯಾಯವಾಗಿತ್ತು, ಈಗ ಆ ನ್ಯಾಯ ನಮಗೆ ದೊರೆಯುತ್ತಿದೆ ಎಂದಾಗಲಿ ನನ್ನ ಅಭಿಪ್ರಾಯವಲ್ಲ. ಇದು ಆಡಳಿತದ ದೃಷ್ಟಿಯಿಂದ ಅನಿವಾರ್ಯವಾಗಿ ಉಂಟಾಗಿರತಕ್ಕ ಸನ್ನಿವೇಶ. ಆದುದರಿಂದ ಹಿಂದೆ ನಮಗೆ ಈ ಪ್ರಾಂತದ ಮೇಲೆ ಹಕ್ಕಿತ್ತೋ ಇಲ್ಲವೋ ಚಾರಿತ್ರಿಕ ದೃಷ್ಟಿಯಿಂದ ಇರಬಹುದೋ ಏನೋ, ಅದೊಂದಕ್ಕೂ ನಾನು ಹೋಗುವುದಿಲ್ಲ ಅಥವಾ ನಮ್ಮ ಆಡಳಿತದ ವಿಸ್ತಾರ ಹೆಚ್ಚಾಗಿರುವುದೆಂಬ ಹೆಮ್ಮೆಯಿಂದ ಆತ್ಮಸ್ತುತಿಯ ಗೋಜಿಗೂ ಹೋಗದೆ ಈ ಏಳು ತಾಲ್ಲೂಕುಗಳವರು ನಮ್ಮ ಸಂಸ್ಥಾನದ ಆಡಳಿತಕ್ಕೊಳಪಡುವ ವಿಚಾರದಲ್ಲಿ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದೇನೆ.

ಇನ್ನೊಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೊರಪಡಿಸಬೇಕೆಂದು ನನ್ನ ಉದ್ದೇಶ. ಈ ಏಳು ತಾಲ್ಲೂಕುಗಳಲ್ಲಿರುವ ಜನರು ಹೆಚ್ಚಾಗಿ ಕನ್ನಡ ಮಾತನ್ನಾಡುವವರಾಗಿರುವುದರಿಂದ ನಮ್ಮ ಸಂಸ್ಥಾನಕ್ಕೆ ಸೇರಬೇಕು, ಇದು ನ್ಯಾಯವಾಗಿದೆ ಎಂಬ ದೃಷ್ಟಿಯಿಂದಲೂ ನಾನು ವಾದಿಸುತ್ತಿಲ್ಲ. ಏಕೆಂದರೆ, ಮೈಸೂರು ಸಂಸ್ಥಾನದಲ್ಲಿ ಬಹುಭಾಗ ಕನ್ನಡ ಮಾತನಾಡುವವರಿದ್ದರೂ ಬೇರೆ ಭಾಷೆಗಳನ್ನು ಮಾತನಾಡುವ ಜನರೂ ಇರುತ್ತಾರೆ. ಕೇವಲ ಭಾಷೆಯ ಆಧಾರದ ಮೇಲೆ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳವರು ಮೈಸೂರು ಸಂಸ್ಥಾನಕ್ಕೆ ಸೇರುತ್ತಾರೆ ಎನ್ನುವುದಕ್ಕಿಂತ ಹೆಚ್ಚಾಗಿ ಆಡಳಿತದೃಷ್ಟಿಯಿಂದ ಮೈಸೂರು ದೇಶದ ಹೊರಗಾಗಿರುವ ಪ್ರದೇಶದ ಜನರು ಅನಿವಾರ್ಯವಾಗಿ ಇಲ್ಲಿಗೆ ಬರುವವರಾಗಿದ್ದಾರಾದ್ದರಿಂದ ಇವರನ್ನು ಸ್ವಾಗತಿಸುವುದಕ್ಕೆ ಸಂತೋಷಪಡುತ್ತಿದ್ದೇನೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ನನ್ನ ಅಭಿಪ್ರಾಯವನ್ನು ಸರಿಯಾಗಿ ತಿಳಿದುಕೊಂಡರೆ, ಇದು ಅರ್ಥಭೇದವಾಗುವ ವಿಷಯವಲ್ಲ. ಇದೊಂದು ಆಡಳಿತ ಸಂಸಾರ. ಒಂದು ಸಂಸಾರದಲ್ಲಿರುವ ಅಣ್ಣತಮ್ಮಂದಿರು ಕಾರಣಾಂತರದಿಂದ ತಾವು ಭಾಗಮಾಡಿಕೊಳ್ಳಬೇಕೆಂದು ಹೇಳುವಂತೆಯೇ ಮದರಾಸು ಸರ್ಕಾರದಲ್ಲಿದ್ದ ಆಂಧ್ರ ಸಹೋದರರು ತಮ್ಮದೇ ಆದ ಬೇರೆ ಆಡಳಿತ ಏರ್ಪಡಿಸಿಕೊಳ್ಳಬೇಕೆಂದು ಹೇಳಿದರು. ಬಳ್ಳಾರಿ ಜಿಲ್ಲೆಯ ಹೆಚ್ಚುಭಾಗದ ಕನ್ನಡ ಮಾತನಾಡುವ ಜನರು ತಾವು ಆಂಧ್ರ ಸಂಸ್ಥಾನಕ್ಕೆ ಸೇರುವುದಿಲ್ಲವೆಂದರು. ಆಡಳಿತ ದೃಷ್ಟಿಯಿಂದ ಮದರಾಸು ಪ್ರಾಂತದಲ್ಲೇ ಅವರಿರುವುದು ಸಾಧ್ಯವಾಗುವುದಿಲ್ಲ. ಹೀಗೆ ಬಳ್ಳಾರಿ ಜಿಲ್ಲೆಯವರು ಎಲ್ಲಿಗೆ ಸೇರಬೇಕೆಂಬ ಪ್ರಶ್ನೆ ಬಂತು. ಒಂದು ಸಂಸಾರದಲ್ಲಿ ಅಣ್ಣತಮ್ಮಂದಿರು ಭಾಗಮಾಡಿಕೊಳ್ಳಬೇಕೆಂದು ಇಷ್ಟಪಟ್ಟಾಗ ಅವರಲ್ಲಿ ಮದುವೆಯಿಲ್ಲದೆ ಕೆಲವರಿದ್ದರೆ, ವಾಸಕ್ಕೆ ಹೆಚ್ಚು ಮನೆಗಳಿಲ್ಲದಿದ್ದರೆ ಅವರನ್ನು ಯಾರಾದರೊಬ್ಬರ ವಶಕ್ಕೆ ವಹಿಸಬೇಕಾಗುತ್ತದೆ. ಆ ರೀತಿ ಕೊಟ್ಟಾಕ್ಷಣಕ್ಕೇ ಅದು ಉದ್ದೇಶಪೂರ್ವಕವಾಗಿ, ಸ್ವಾರ್ಥದೃಷ್ಟಿಯಿಂದ ಮಾಡಿದ್ದಲ್ಲ; ಅನಿವಾರ್ಯವಾಗಿ, ಸಂಧರ್ಭಕ್ಕನುಸಾರವಾಗಿ ಒಬ್ಬರಿಗೊಬ್ಬರು ಹೊಂದಿಕೊಂಡುಹೋಗುವಂಥ ಒಂದು ವ್ಯವಸ್ಥೆಯಾಗಿರುತ್ತದೆಂದು ನಾನು ಭಾವಿಸುತ್ತೇನೆ. ಹೀಗೆಯೇ ಆ ಬಳ್ಳಾರಿ ಏಳು ತಾಲ್ಲೂಕುಗಳು ಮೈಸೂರು ಸಂಸ್ಥಾನದ ಆಡಳಿತಕ್ಕೊಳಪಡಬೇಕಾದ ವಿಚಾರದಲ್ಲಿ, ಭಾಷಾವಾರು ದೃಷ್ಟಿಯಿಂದಲಾಗಲಿ, ಅಥವಾ ನಮಗಿದ್ದಂಥ ಹಿಂದಿನ ಹಕ್ಕುಗಳ ದೃಷ್ಟಿಯಿಂದಾಗಲಿ ನಮಗೆ ಲಭಿಸಿತೆಂದು ಭಾವಿಸುವುದಕ್ಕೆ ಬದಲಾಗಿ, ಆಡಳಿತ ಸೌಕರ್ಯಕ್ಕಾಗಿ, ಆ ಏಳು ತಾಲ್ಲೂಕುಗಳನ್ನೂ ಆಂಧ್ರ ಸರ್ಕಾರಕ್ಕಾಗಲೀ ಅಥವಾ ಮದ್ರಾಸ್ ಸರ್ಕಾರಕ್ಕಾಗಲೀ ಒಳಪಡಿಸುವುದಕ್ಕಿಂತ ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಡಿಸುವುದೇ ಅನುಕೂಲವೆಂದು ಭಾವಿಸಿ, ಆ ಏಳು ತಾಲ್ಲೂಕುಗಳನ್ನೂ ನಮ್ಮ ಸಂಸ್ಥಾನದ ಆಡಳಿತಕ್ಕೆ ಒಳಪಡಿಸಿರುವುದು ಎಂದು ನಾವು ಭಾವಿಸಬೇಕಾಗಿದೆ. ಇದು ನ್ಯಾಯವಾದುದಾಗಿದೆ. ಆದ್ದರಿಂದ ಸಂತೋಷಕರವಾದ ವಿಚಾರವೆಂದು ಹೇಳುತ್ತೇನೆ.

ಈ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಈ ಮಸೂದೆಯನ್ನು ಮಂಡಿಸುವಾಗ ನನ್ನ ಅನೇಕ ಮಿತ್ರರು ಅನೇಕ ವಿಚಾರಗಳಲ್ಲಿ ಅವರಿಗಿದ್ದ ಸಂಶಯಗಳನ್ನು ನಿವಾರಣೆಮಾಡಿಕೊಳ್ಳಲು ಕೆಲವರು ಅಂಕಿಅಂಶಗಳ ಬಗ್ಗೆಯೂ ಮತ್ತೆ ಕೆಲವರು ಅಲ್ಲಿನ ಆದಾಯವೇನು, ಅಲ್ಲಿಗೆ ಆಗತಕ್ಕ ಖರ್ಚೆಷ್ಟು, ಆ ಆದಾಯ-ವೆಚ್ಚದಲ್ಲಿ ಏನಾದರೂ ವ್ಯತ್ಯಾಸವಿದೆಯೇ, ಅದರಿಂದ ನಮಗೆ ಲಾಭವೋ ಅಥವ ನಷ್ಟವೋ, ಆ ತುಂಗಭದ್ರಾ ಪ್ರಾಜೆಕ್ಟಿನಿಂದ ಆ ಪ್ರದೇಶದಲ್ಲಿ ನಮಗೆ ಬರತಕ್ಕ ಭಾಗದಲ್ಲಿರುವ ತರೀ ಜಮೀನೆಷ್ಟು, ಆಂಧ್ರಕ್ಕೆ ಹೋಗತಕ್ಕದ್ದೆಷ್ಟು, ಅಲ್ಲಿರುವ ಆಸ್ಪತ್ರೆ, ಪಾಠಶಾಲೆಗಳೆಷ್ಟು, ರಸ್ತೆಗಳು ಹೇಗಿರುತ್ತವೆ, ಎಂಬ ಇತ್ಯಾದಿ ಹಲವಾರು ವಿಷಯಗಳನ್ನು ಪ್ರಶ್ನೆಮಾಡಿದ್ದಾರೆ. ಬಹುಶಃ ಅವರು ಈ ವಿಚಾರಗಳನ್ನೆಲ್ಲಾ ತಿಳಿದುಕೊಂಡು ಅನಂತರ ಅವರು ತಮ್ಮತಮ್ಮ ಅಭಿಪ್ರಾಯಗಳನ್ನು ಇದರ ಬಗ್ಗೆ ಸೂಚಿಸುವುದು ಸೂಕ್ತವಾಗಿರುತ್ತದೆಂದು ಭಾವಿಸಿ, ಆ ರೀತಿಯಾಗಿ ಅವರು ಕೇಳಿರಬಹುದೆಂದು ನಾನು ಭಾವಿಸುತ್ತೇನೆ. ಅದೇನೇ ಇರಲಿ, ಆಡಳಿತ ನಡೆಸುವಾಗ ಮತ್ತು ಒಂದು ಜವಾಬ್ದಾರಿಯುತವಾದ ಕಾರ್ಯವನ್ನು ಕೈಕೊಳ್ಳುವಾಗ, ಅದರ ರೂಪುರೇಖೆಗಳೇನು, ಅದರಿಂದಾಗಬಹುದಾದ ಪರಿಣಾಮಗಳೇನು, ಅದರಿಂದ ಲಾಭವಾಗುತ್ತದೆಯೇ ಅಥವಾ ನಷ್ಟವಾಗುತ್ತದೆಯೇ, ಅದರಿಂದ ನಮಗೆ ಏನಾದರೂ ತೊಂದರೆ ಅಥವಾ ಅನಾನುಕೂಲಗಳು ಆಗುತ್ತವೆಯೇ ಎನ್ನತಕ್ಕ ಈ ಅನುಮಾನಗಳೊಂದಕ್ಕೂ ಅವಕಾಶವೇ ಇರುವುದಿಲ್ಲ. ಈ ಬದಲಾವಣೆಯು ಕೇವಲ ಆಡಳಿತ ಸೌಕರ್ಯದ ಒಂದೇಒಂದು ದೃಷ್ಟಿಯಿಂದ ಆ ಏಳು ತಾಲ್ಲೂಕುಗಳನ್ನು ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ಅವರು ಸೂಚಿಸಿದ್ದಾರೆ. ಇದರಲ್ಲಿ ಒಬ್ಬರಿಗೆ ಆದಾಯ ಉಂಟಾಗುತ್ತದೆ, ಮತ್ತೊಬ್ಬರಿಗೆ ಲುಕ್ಸಾನಾಗುತ್ತದೆಯೆಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆದುದರಿಂದ ಆ ಪ್ರಾಂತದ ಜನರ ಇಷ್ಟದಂತೆ ನಾವು ಅವರಿಗೆ ಸ್ವಾಗತ ನೀಡಬೇಕಾದದ್ದು ಉಚಿತ. ಅದರಂತೆ ಈ ಸಭೆಯವರೆಲ್ಲರೂ ಈ ಮಸೂದೆಗೆ ಸ್ವಾಗತನೀಡಬೇಕೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ಈಗಾಗಲೇ ತಮಗೆಲ್ಲರಿಗೂ ವೇದ್ಯವಾಗಿರುವಂತೆ ಅಲ್ಲಿ ಚಿನ್ನ ಸಿಕ್ಕುತ್ತದೆ, ಕಾಡಿದೆ, ಒಂದುಲಕ್ಷ ಎಕರೆಗಳಿಗೂ ಜಾಸ್ತಿಯಾಗಿ ತರೀ ಭೂಮಿ ಆಗುತ್ತದೆ. ಇಂಥ ಪ್ರದೇಶ ನಮಗೆ ಸಿಕ್ಕಿದರೆ ಅಧರಿಂದ ಒಂದು ಹೆಚ್ಚಿನ ಪ್ರಯೋಜನ ನಮಗೆ ಲಭಿಸುತ್ತದೆ. ಎನ್ನುವ ಒಂದು ದೃಷ್ಟಿಯೂ ಇದೆ. ಆದರೆ ಈ ದೃಷ್ಟಿಯಿಂದ ಮಾತ್ರ

ನಾವು ಹಾಗೆ ಆಸೆಪಡುವುದಕ್ಕೆ ಪ್ರಯತ್ನಪಡಬಾರದು; ಮತ್ತು ಅಲ್ಲಿ ಆದಾಯಕ್ಕಿಂತ ಖರ್ಚೇ ಜಾಸ್ತಿ, ಅಭಿವೃದ್ಧಿ ಕಾರ್ಯಗಳು ಬೇಕಾದಷ್ಟು ನಡೆಯಬೇಕಾಗಿದೆ, ಆಸ್ಪತ್ರೆಗಳೂ, ಸ್ಕೂಲುಗಳೂ ಅಲ್ಲಿ ಸಾಕಾದಷ್ಟು ಇಲ್ಲ, ರಸ್ತೆಗಳು ಉತ್ತಮ ಪರಿಸ್ಥಿತಿಯಲ್ಲಿಲ್ಲ, ಈ ಬಾಬುಗಳಿಗಾಗಿ ಹೆಚ್ಚಿನ ಹಣವನ್ನು ಖರ್ಚುಮಾಡಬೇಕಾಗಿ ಬರುತ್ತದೆ, ಆದಾಯಕ್ಕಿಂತ ಖರ್ಚೇ ಜಾಸ್ತಿಯಾಗಿದೆ, ಇದು ನಮ್ಮ ಕೈಕಚ್ಚುತ್ತದೆ, ಆದುದರಿಂದ ನಾವು ಇದಕ್ಕೆ ಹಿಂದೆಗೆಯಬೇಕು ಎನ್ನುವ ವಾದ ಕೂಡ ಸರಿಯಾದ್ದಲ್ಲ. ಹೀಗೆ ನಮ್ಮ ಮುಂದೆ ಬರಬಹುದಾದ ಈ ರೀತಿಯ ಎರಡು ಮುಖವಾದ ವಾದಗಳನ್ನು ಕೈಬಿಟ್ಟುಕೊಂಡು ಕೇವಲ ಅವರು ಇದನ್ನು ಒಂದು ಆಡಳಿತದೃಷ್ಟಿಯ ಸೌಕರ್ಯಕ್ಕಾಗಿ ಇದನ್ನು ಏರ್ಪಾಡುಮಾಡಿದ್ದಾರೆಂದು ಭಾವಿಸಬೇಕೆಂದು ಹೇಳುತ್ತೇನೆ. ಆದುದರಿಂದ ಸರ್ವರೂ ಇದನ್ನು ಸ್ವಾಗತಿಸಬೇಕೆಂದು ನಾನು ಸಭೆಯನ್ನು ಪ್ರಾರ್ಥಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಹೇಳಿರುವಹಾಗೆ, ಇದು ಮೈಸೂರು ರಾಜ್ಯ, ಇದು ಮದ್ರಾಸ್ ರಾಜ್ಯ, ಇದು ಆಂಧ್ರ ರಾಜ್ಯಗಳೆಲ್ಲವೂ ಕೇವಲ ಒಂದು ಆಡಳಿತ ಸೌಕರ್ಯದ ದೃಷ್ಟಿಯಿಂದ ಬೇರೆಬೇರೆ ಸರ್ಕಾರಗಳ ಆಡಳಿತಕ್ಕೆ ಒಳಪಟ್ಟವೆಯೇ ಹೊರತು ಮತ್ತೆ ಬೇರೆಯೇನೂ ಅಲ್ಲ. ಆದ್ದರಿಂದ ಅಲ್ಲಿರತಕ್ಕ ಜನರೇ ಬೇರೆ, ಇಲ್ಲಿರತಕ್ಕ ಜನರೇ ಬೇರೆ ಎಂಬ ಭಿನ್ನಭಾವನೆಮಾಡುವುದಕ್ಕೆ ಅವಕಾಶವೇ ಇಲ್ಲ. ಕಾರಣವೇನೆಂದರೆ ನಾವೆಲ್ಲರೂ ಭಾರತೀಯರು; ಭಾರತದ ಯೂನಿಯನ್ನಿನಲ್ಲಿರತಕ್ಕಂಥವರು.

ಮೊನ್ನೆತಾನೆ ಮದ್ರಾಸಿನ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. "ಮೈಸೂರು ಸರ್ಕಾರದವರು ಸಾಲ ಎತ್ತುವುದಕ್ಕೆ ಮಾಡಿದ ಪ್ರಯತ್ನದಲ್ಲಿ ಅವರಿಗೆ ಅಷ್ಟು ಜಯ ದೊರೆತಿರುವುದಿಲ್ಲ. ಈಗ ಮದ್ರಾಸ್ ಸರ್ಕಾರಕ್ಕೆ ಬೇಕಾಗಿದ್ದ ಸಾಲಕ್ಕಿಂತಲೂ ಹೆಚ್ಚಿಗೆ ಸಾಲ ದೊರೆತಿದೆ. ಅದಕ್ಕೋಸ್ಕರವಾಗಿ ಮದ್ರಾಸ್ ಸರ್ಕಾರಕ್ಕೆ ಸಾಲ ನೀಡಲು ಮುಂದೆ ಬರಬೇಕೆಂದಿದ್ದ ಮಹನೀಯರೆಲ್ಲರೂ ಈಗ ಆ ಮೈಸೂರು ಸರ್ಕಾರದ ಸಾಲದ ಬಗ್ಗೆ ಸಹಾನುಭೂತಿ ತೋರಿಸಬೇಕೆಂದು ತಿಳಿಸಿರುತ್ತಾರೆ. ಅಷ್ಟಕ್ಕೆ ಅವರು ಸುಮ್ಮನಿರದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಈ ಸರ್ಕಾರಗಳು ಕೇವಲ ಆಡಳಿತ ದೃಷ್ಟಿಯಿಂದ ಬೇರೆ ಬೇರೆ ಎಂಬುದಾಗಿ ಕರೆಯುತ್ತಿದ್ದಾಗ್ಯೂ ಆ ಉಭಯ ಸರ್ಕಾರಗಳ ಆಡಳಿತಕ್ಕೊಳಪಟ್ಟಿರುವ ಪ್ರಜೆಗಳೆಲ್ಲಾ ಒಂದೇ ಆಗಿದ್ದಾರೆ. ನಾವೆಲ್ಲರೂ ಭಾರತೀಯರು, ನೆರೆಹೊರೆಯ ಸಂಸ್ಥಾನಗಳವರು, ನಾವೆಲ್ಲರೂ ಒಂದು ಸಹೋದರ ಭಾವನೆಯಿಂದ ವರ್ತಿಸಬೇಕು, ಮೈಸೂರು ಅಭಿವೃದ್ಧಿಯಾದರೆ ಮದ್ರಾಸ್ ಅಭಿವೃದ್ಧಿಯಾದಹಾಗೆಯೇ ಎಂಬುದಾಗಿ ಹೇಳಿದ್ದಾರೆ. ಈ ರೀತಿಯಾಗಿ ಅವರು ಹೇಳಿರುವುದನ್ನು ನಾವು ಸ್ವಲ್ಪ ಗಮನವಿಟ್ಟು ನೋಡುವುದಾದರೆ, ಯಾವ ಒಂದು ಪ್ರದೇಶ ಆಂಧ್ರ ಸಂಸ್ಥಾನಕ್ಕೇ ಒಳಪಟ್ಟಿರಲಿ ಅಥವಾ ಮದ್ರಾಸ್ ಸರ್ಕಾರದ ಆಡಳಿತಕ್ಕೇ ಒಳಪಟ್ಟಿರಲಿ, ಅಥವಾ ಮೈಸೂರು ಸರ್ಕಾರದ ಆಡಳಿತಕ್ಕೇ ಒಳಪಟ್ಟಿರಲಿ, ಅಥವಾ ಬೊಂಬಾಯಿ ಸರ್ಕಾರದ ಆಡಳಿತಕ್ಕೇ ಒಳಪಟ್ಟಿರಲಿ, ಪ್ರದೇಶಗಳಲ್ಲಿರತಕ್ಕವರೆಲ್ಲರೂ ಒಂದೇ, ನಾವೆಲ್ಲರೂ ಒಂದೇ ಕೋರ್ಟು ಕಚೇರಿಗಳಿಗೆ ಹೋಗಬೇಕು, ಒಂದೇ ಶಾಸನಸಭೆಗೆ ಸೇರಿರಬೇಕು ಎಂದರೆ ಅದರಿಂದ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ಅಂಥ ತೊಂದರೆಗಳನ್ನು ನಿವಾರಣೆ ಮಾಡಬೇಕೆಂದೇ ಹೀಗೆ ಬೇರೆಬೇರೆ ಸರ್ಕಾರಗಳನ್ನು ಏರ್ಪಾಡು ಮಾಡಿ ಅವರವರ ದಿನಚರಿ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲಿ ಎಂಬ ಉದ್ದೇಶದಿಂದ ಹೀಗೆ ಮಾಡಿರುತ್ತಾರೆ. ಹೀಗೆ ಭಾರತೀಯರಾದ ನಾವು ಯಾವ ಸರ್ಕಾರದ ಆಡಳಿತಕ್ಕೇ ಒಳಪಟ್ಟಿರಲಿ, ನಾವೆಲ್ಲರೂ ಒಂದೆ. ಅದರೆ ಆಡಳಿತದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದು. ಎಲ್ಲರಿಗೂ ಸರಿಸಮಾನವಾದ ಹಕ್ಕುಬಾಧ್ಯತೆಗಳಿರಬೇಕೆಂದು ಕೇಳತಕ್ಕಂಥ ಕಾಲದಲ್ಲಿ ನಾವಿರುತ್ತೇವೆ. ಆದುದರಿಂದ ಯಾವ ಭಾಗವನ್ನೇ ಆಗಲಿ ಮದ್ರಾಸ್ ಸರ್ಕಾರದ ಆಡಳಿತಕ್ಕೊಳಪಡಿಸುವುದರಿಂದಲೇ ಆಗಲಿ ಅಥವಾ ಮೈಸೂರು ಸರ್ಕಾರದ ಆಡಳಿತಕ್ಕೊಳಪಡಿಸುವುದರಿಂದಲೇ ಆಗಲಿ ಅಷ್ಟೇನೂ ವ್ಯತ್ಯಾಸವಾಗುವುದಿಲ್ಲ. ಹೀಗೆ ಯಾವ ಒಂದು ದೃಷ್ಟಿಯಿಂದ ನೋಡಿದರೂ ಆ ಬಳ್ಳಾರಿ ಏಳು ತಾಲ್ಲೂಕುಗಳು ಮೈಸೂರಿಗೆ ಸೇರುವುದೇ ಸೂಕ್ತವೆಂದು ಹೇಳಿರುವುದಕ್ಕೆ ನಾವುಗಳೆಲ್ಲರೂ ನಮ್ಮ ಸಂತೋಷವನ್ನು ವ್ಯಕ್ತಪಡಿಸಬೇಕಾಗಿದೆ. ಹೀಗೆ ಮಾಡುವುದು ಸೂಕ್ತ ಮತ್ತು ಸಹಜವಾಗಿದೆಯೇ ಹೊರತು ಇಂಡಿಯಾ ಸರ್ಕಾರದವರಿಗೆ ಇದನ್ನು ಶಿಫಾರ್ಸು ಮಾಡುವುದರಲ್ಲಿ ನನಗೆ ಒಂದು ಅನುಮಾನವಾಗಲೀ ಅಥವಾ ಒಂದು ಹೆಮ್ಮೆಯಾಗಲಿ ಪಡಲು ಈ ಎರಡಕ್ಕೂ ಅವಕಾಶವೇ ಇಲ್ಲವೆಂದು ಹೇಳುತ್ತೇನೆ.

ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಅಂಶವನ್ನು ಸೂಚಿಸಬೇಕೆಂದಿದ್ದೇನೆ. ಕೆಲವು ಕಲಮುಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡುವುದರ ಮೂಲಕ, ಆಡಳಿತ ದೃಷ್ಟಿಯಿಂದ ಮೈಸೂರು ಸರ್ಕಾರ ಒಂದು ಹೆಚ್ಚಿನ ಇಕ್ಕಟ್ಟಿಗೆ ಸಿಕ್ಕದಂತೆ ಸೂಚನೆ ಕೊಡುವುದಕ್ಕೆ ಸಾಧ್ಯವಿದೆ. ಇದನ್ನು ನಾವು ಕ್ಲಾಜ್‌ವಾರ್ ಆಗಿ ಚರ್ಚೆ ಮಾಡುವಾಗ ಅನಾವಶ್ಯಕವಾಗಿ ನಮ್ಮ ಸರ್ಕಾರದಹಣಕಾಸಿನ ವ್ಯವಸ್ಥೆಯಲ್ಲಾಗಲಿ ಅಥವಾ ಆಡಳಿತಕ್ಕೆ ಅನಾನುಕೂಲ ಅಥವಾ ತೊಂದರೆ ಬರುವಂಥ ಸೂಚನೆಗಳಿದ್ದರೆ ಆ ಬಗ್ಗೆಯಾಗಲಿ ಸೂಕ್ತ ತಿದ್ದುಪಡಿಗಳನ್ನು ಸೂಚಿಸುವುದರಲ್ಲಿ ಅಭ್ಯಂತರವೇನೂ ಇರಲಾರದೆಂದು ನಾನು ಭಾವಿಸುತ್ತೇನೆ. ಸಾಮಾನ್ಯ ತತ್ವಗಳನ್ನು ಅಂಗೀಕರಿಸುತ್ತ ಈ ಆಂಧ್ರ ಸ್ಟೇಟ್‌ಬಿಲ್ಲನ್ನು ಸ್ವಾಗತಿಸಿ ಆ ಏಳು ತಾಲ್ಲೂಕಿನ ಮಹಾಜನರು ನಮ್ಮ ಸಂಸ್ಥಾನದ ಆಡಳಿತಕ್ಕೊಳಪಡುವುದರಲ್ಲಿ ಯಾರದೂ ಏನೂ ಅಭ್ಯಂತರವಿರುವುದಿಲ್ಲ. ಅವರನ್ನು ಸ್ವಾಗತಿಸುತ್ತೇವೆಂದು ಹೇಳುವುದು ನಮ್ಮ ಕರ್ತವ್ಯ.

ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನೂ ನಾನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಆ ಏಳು ತಾಲ್ಲೂಕುಗಳೂ ಮೈಸೂರು ಸರ್ಕಾರದ ಆಡಳಿತಕ್ಕೊಳಪಡಬೇಕೆಂದು ಹೇಳಿರುವುದರಿಂದ, ನಮ್ಮ ಆಂಧ್ರ ಸ್ನೇಹಿತರು ಕೆಲವರು ಕೋಪೋದ್ರೇಕಿತರಾಗಿ ಅನೇಕ ತರಹವಾದ ಕಾರ್ಯಚಟುವಟಿಕೆಗಳಲ್ಲಿ, ದೇಶಕ್ಕೆ ಕೇಡಾಗುವ ರೀತಿಯಲ್ಲಿ ಜನರ ಮನಸ್ಸಿಗೆ ನೋವನ್ನುಂಟುಮಾಡುವ ರೀತಿಯಲ್ಲಿ ಮತ್ತು ದ್ವೇಷಾಸೂಯೆಗಳನ್ನು ಹೆಚ್ಚಿಸತಕ್ಕ ರೀತಿಯಲ್ಲಿ ಭಾಗವಹಿಸುತ್ತಿದ್ದಾರೆಂಬುದು ಒಂದು ವ್ಯಸನಕರವಾದ ವಿಚಾರ. ತತ್ವದೃಷ್ಟಿಯನ್ನು ಇಟ್ಟುಕೊಳ್ಳದೆ ಆ ಏಳು ತಾಲ್ಲೂಕುಗಳು ಅತ್ತಕಡೆಗೇ ಸೇರಬೇಕಾಗಿತ್ತು, ಆದರೆ ಇತ್ತಕಡೆಗೆ ಸೇರಿದವು ಎಂಬ ನೆಪದಿಂದ ಜಗಳವಾಡತಕ್ಕದ್ದು ಅಷ್ಟು ಸರಿಯಾದದ್ದಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ಕನ್ನಡ ಮಾತನಾಡುವವರ ಅಂಗಡಿಗಳಮೇಲೆ ಧಾಳಿ ಮಾಡುವುದು ಮೈಸೂರಿನಿಂದ ಅಲ್ಲಿಗೆ ಅಂಕಿಅಂಶಗಳನ್ನು ಸಂಗ್ರಹಿಸಲು ಹೋಗಿದ್ದ ಅಧಿಕಾರಿಗಳ ಮೇಲೆ ಕೈಮಾಡುವುದು, ಇವೆಲ್ಲಾ ಬಹಳ ಶೋಚನೀಯ ವಿಚಾರ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಗಳು. ಯಾರೇ ಆಗಲಿ ಹಾಗೆ ದ್ವೇಷ ಮತ್ತು ಕೋಪಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಈ ರೀತಿಯಾಗಿ ಇನ್ನುಮುಂದಕ್ಕೆ ನಮ್ಮ ಆಂಧ್ರಸ್ನೇಹಿತರು ಕೋಪಕ್ಕೆ ಅವಕಾಶಕೊಡದೆ ನಾವೇ ಬೇರೆ, ಅವರೇ ಬೇರೆ, ಎಂಬ ಬೇಧಭಾವನೆಯನ್ನು ಬಿಟ್ಟು ಕೇವಲ ಆಡಳಿತ ಸೌಕರ್ಯ ಕ್ಕೋಸ್ಕರ ಇದನ್ನೆಲ್ಲಾ ಮಾಡಿಕೊಂಡಿರುವುದರಿಂದ ಅವರೆಲ್ಲರೂ ತಾಳ್ಮೆಯಿಂದ ವರ್ತಿಸುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ಎರಡನೆಯದಾಗಿ ಜಿಜ್ಞಾಸಾಸ್ಪದವಾದ ಕೆಲವು ಅಂಶಗಳೂ ಇರುತ್ತವೆ: ಈಗ ಆ ಆಲೂರು, ಆದವಾನಿ, ರಾಯದುರ್ಗ—ಈ ಸ್ಥಳಗಳಲ್ಲಿ ಹೆಚ್ಚು ಭಾಗದ ಜನರು ಕನ್ನಡ ಮಾತನಾಡತಕ್ಕವರೇ ಆಗಿದ್ದಾರೆ. ಅವರೂ ಮೈಸೂರು ಆಡಳಿತಕ್ಕೊಳಪಡಬೇಕೆಂದು ಕೆಲವರು ಹೇಳುತ್ತಿದ್ದಾರೆ. ನಾನೀಗ ಕೇವಲ ಒಂದು ಭಾಷಾವಾರು ದೃಷ್ಟಿಯಿಂದ ಚರ್ಚೆ ಮಾಡುತ್ತಿಲ್ಲ. ಅಲ್ಲಿ ಕನ್ನಡ ಮಾತನಾಡುವ ಜನರೇ ಹೆಚ್ಚಾಗಿರಬಹುದು. ಆದರೆ ಆಡಳಿತ ಸೌಕರ್ಯ ದೃಷ್ಟಿಯಿಂದ ಆ ಮೂರು ತಾಲ್ಲೂಕುಗಳೂ ಮೈಸೂರಿಗೇ ಸೇರಬೇಕೆಂದು ಕೇಳುತ್ತಿರುವುದು ಸೂಕ್ತವಾಗಿ ಇದೆಯೆಂದು ಎಲ್ಲರಿಗೂ ಕಂಡುಬರುತ್ತಿದೆ. ಉದಾಹರಣೆಗೆ ಈಗ ಪಾವುಗಡ ತಾಲ್ಲೂಕನ್ನು ತೆಗೆದುಕೊಳ್ಳೋಣ, ಈ ತಾಲ್ಲೂಕು ತುಮಕೂರು ಜಿಲ್ಲೆಗೆ ಸೇರಿದೆ. ನಾವೀಗ ಪಾವಗಡಕ್ಕೆ ಹೋಗಬೇಕಾಗಿದ್ದರೆ ಮದರಾಸಿಗೆ ಸೇರಿರತಕ್ಕ ಮಡಕಶಿರಾ ತಾಲ್ಲೂಕನ್ನು ಹಾದುಹೋಗಬೇಕಾಗಿದೆ. ಹೀಗಿರುವುದರಿಂದ ಮಡಕಶಿರಾ ತಾಲ್ಲೂಕು ಸಹ ಈಗ ಆಡಳಿತ ಸೌಕರ್ಯ ದೃಷ್ಟಿಯಿಂದ ಮೈಸೂರಿಗೆ ಸೇರತಕ್ಕದ್ದು ಸೂಕ್ತವಾಗಿದೆಯೆಂದು ಹೇಳಿದರೆ ಯಾರಾದರೂ ಇದನ್ನು ಒಪ್ಪಿಕೊಳ್ಳಲೇಬೇಕು. ಹೀಗೆ ಒಂದು ಆಡಳಿತ ದೃಷ್ಟಿಯಿಂದಲೂ ಮತ್ತು ಇನ್ನೂ ಅನೇಕ ದೃಷ್ಟಿಗಳಿಂದಲೂ ಅನಂತಪುರ ಜಿಲ್ಲೆಗೆ ಸೇರಿರತಕ್ಕ ಮಡಕಶಿರಾ ತಾಲ್ಲೂಕೂ ಸಹ ಮೈಸೂರಿಗೆ ಸೇರತಕ್ಕದ್ದು ಸೂಕ್ತವಾಗಿದೆ. ಈ ರೀತಿಯಾಗಿ ನಾವು ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ನಾವು ಒಂದು ದುರಾಸೆಯಿಂದ, ನೆಲದಾಹದಿಂದ, ಹೆಚ್ಚಾಗಿ ರಾಜ್ಯ ವಿಸ್ತರಣೆ ಮಾಡಬೇಕೆಂಬ ದೃಷ್ಟಿಯಿಂದ ಕೇಳುತ್ತಿದ್ದೇವೆಂದು ಯಾರಾದರೂ ಭಾವಿಸಿಕೊಂಡಲ್ಲಿ ಅದು ಸರಿಯಲ್ಲವೆಂದು ಹೇಳುತ್ತೇನೆ. ಇದರಲ್ಲಿ ಯಾರಿಗೂ ಅಂಥ ನೆಲದಾಹವಿಲ್ಲ. ಇದು ಪಾಳ್ಳೇಗಾರರ ಕಾಲವಲ್ಲ. ಒಂದು ಸ್ವತಂತ್ರ ಆಡಳಿತ ನಡೆಸಬೇಕೆಂಬ ಒಂದು ದುರಾಸೆಯಿಂದ ವರ್ತಿಸುತ್ತಿದ್ದಾರೆಂಬ ಅಭಿಪ್ರಾಯಕ್ಕೆ ಎಳ್ಳಷ್ಟೂ ಅವಕಾಶವಿಲ್ಲ. ಈ ಪರ್ವ ಕಾಲದಲ್ಲಿ ನಾವು ಆಸೇತು ಹಿಮಾಚಲ ಪರ್ಯಂತದವರೆಗೂ ಒಂದೇ ಆಡಳಿಕ್ಕೊಳಪಟ್ಟ ರಾಜ್ಯದಲ್ಲಿದ್ದರೂ ಆಡಳಿತದ ಅನುಕೂಲಕ್ಕಾಗಿ ಹೀಗೆ ಒಂದೊಂದು ವಿಭಾಗ ಮಾಡಿಕೊಂಡು, ಈ ಒಂದೊಂದು ಸಣ್ಣಸಣ್ಣ ಭಾಗಗಳಿಗೂ ಒಂದೊಂದು ಸರ್ಕಾರವನ್ನು ರಚಿಸಿಕೊಂಡಿರುತ್ತೇವೆ. ಆದುದರಿಂದ ನಾವು ಆಡಳಿತ ಅನುಕೂಲದ ಮತ್ತು ಸೌಕರ್ಯದ ದೃಷ್ಟಿಗಳಿಂದ ನಮ್ಮ ಅಕ್ಕಪಕ್ಕದ ಇನ್ನೂ ಕೆಲವು ಭಾಗಗಳು ನಮ್ಮ ಮೈಸೂರಿನ ಆಡಳಿತಕ್ಕೆ ಒಳಪಡತಕ್ಕಂಥಾದ್ದು ಸೂಕ್ತವೆಂದು ಮಾಡುವ ಸಲಹೆಗಳನ್ನು ಖಂಡಿತ ನಮ್ಮ ಸ್ನೇಹಿತರು ಯಾರೇ ಆಗಲಿ ಅದರಲ್ಲೂ ಮುಖ್ಯವಾಗಿ ನಮ್ಮ ಆಂಧ್ರ ಸ್ನೇಹಿತರು ತಪ್ಪಾಗಿ ತಿಳಿದುಕೊಳ್ಳಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಆದುದರಿಂದ ಪುನಃ ಈ ಪ್ರಶ್ನೆಯನ್ನು ಬೌಂಡರಿ ಕಮಿಷನ್ ತೀರ್ಮಾನಕ್ಕೆ ಒಳಪಡಿಸಬೇಕೆಂಬ ಸೂಚನೆಯನ್ನೂ ಕೊಡಬಯಸುತ್ತೇನೆ.

ನಮ್ಮ ಸಂಸ್ಥಾನದ ಮೇಲ್ಮನೆಯಾದ ಲೆಜಿಸ್ಲೇಟಿವ್ ಕೌನ್ಸಿಲಿನವರು ಈ ಬಗ್ಗೆ ಒಂದು ನಿರ್ಣಯವನ್ನು ಈಗಾಗಲೇ ಅಂಗೀಕಾರ ಮಾಡಿದ್ದಾರೆ. ಈ ಸಂದರ್ಭದಲ್ಲಿ ಆ ವಿಷಯ ಕುರಿತು ಪ್ರಸ್ತಾಪಿಸಲಿಷ್ಟಪಡುತ್ತೇನೆ. ಈಗ ತೀರ್ಮಾನವಾಗಿರತಕ್ಕ ಪ್ರಶ್ನೆಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿರುವುದು ಬಳ್ಳಾರಿ ತಾಲ್ಲೂಕಿನ ಪ್ರಶ್ನೆ. ಕೇಂದ್ರ ಸರ್ಕಾರದವರೂ ಕೂಡ ಬಾಕಿ ಆರು ತಾಲ್ಲೂಕುಗಳ ವಿಚಾರವಾಗಿ ಯಾವ ರೀತಿ ಒಂದು ತೀರ್ಮಾನ ತೆಗೆದುಕೊಂಡರೋ ಆ ರೀತಿ ತೀರ್ಮಾನವನ್ನು ಇದರ ಬಗ್ಗೆ ಅವರು ಕೈಕೊಳ್ಳದೆ, ಇದಕ್ಕೇ ಒಂದು ಬೇರೆ ಕಾರ್ಯಕ್ರಮವನ್ನನುಸರಿಸಿ, ಇದಕ್ಕಾಗಿ ಒಬ್ಬ ನ್ಯಾಯಮೂರ್ತಿಯನ್ನೇ ನೇಮಿಸಿ, ಅವರು ಒಪ್ಪಿಸಿದ ಸಲಹೆಗಳಿಗನುಗುಣವಾಗಿ ಅಂಗೀಕಾರ ಮಾಡಿ ಬಳ್ಳಾರಿ ತಾಲ್ಲೂಕು ಮೈಸೂರು ಸಂಸ್ಥಾನಕ್ಕೆ ಸೇರಬೇಕೆಂದು ತೀರ್ಮಾನಮಾಡಿದ್ದಾರೆ. ಹೀಗೆ ತೀರ್ಮಾನವಾಗಿರತಕ್ಕದ್ದನ್ನು ಪುನಃ ಬದಲಾವಣೆಮಾಡುವುದಕ್ಕಾಗಲಿ ಅಥವಾ ದೀರ್ಘವಾದ ಚರ್ಚೆಮಾಡಲು ಒಂದು ಅವಕಾಶವನ್ನು ಕೊಡುವುದೇ ಆಗಲಿ ಸೂಕ್ತವಲ್ಲ ಎಂಬುದಾಗಿ ಏನು ಒಂದು ಅಭಿಪ್ರಾಯವನ್ನು ಆ ಮೇಲ್ಮನೆಯವರು ಈಗಾಗಲೇ ವ್ಯಕ್ತಪಡಿಸಿದ್ದಾರೋ ಅದನ್ನೇ ನಾನೂ ಸಂಪೂರ್ಣವಾಗಿ ಸರಿಯೆಂದು ಒಪ್ಪಿಕೊಂಡು, ಈ ಸಭೆಯೂ ಸಹ ಅಂಥ ಒಂದು ಅಭಿಪ್ರಾಯವನ್ನೇ ವ್ಯಕ್ತಪಡಿಸುವುದು ಸೂಕ್ತವೆಂದು ಸೂಚಿಸುತ್ತೇನೆ. ಇಷ್ಟು ಮಾತುಗಳನ್ನು ಹೇಳಿ ನಮ್ಮ ಮುಂದೆ ಇರತಕ್ಕ ಮಸೂದೆಯನ್ನು ನಾನು ಹೃತ್ಪೂರ್ವಕದಿಂದ ಸ್ವಾಗತಿಸಿ ನಮ್ಮ ಆ ಬಳ್ಳಾರಿ 7 ತಾಲ್ಲೂಕುಗಳ ಅಣ್ಣ ತಮ್ಮಂದಿರನ್ನು ಸಂತೋಷದಿಂದ ನಮ್ಮ ಆಡಳಿತದೊಳಗೆ ಬರುವಂತೆ ಸ್ವಾಗತ ನೀಡುವುದರ ಜೊತೆಗೆ ಬೌಂಡರಿ ಕಮಿಷನ್ನಿನವರು ತೀರ್ಮಾನಮಾಡಬೇಕಾಗಿರುವ ಇನ್ನೂ ಕೆಲವು ಪ್ರದೇಶಗಳ ಸ್ನೇಹಿತರೂ ಸಹ ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರುವಂತಾಗಲಿ ಎಂದು ಹಾರೈಸಿ ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ಮಸೂದೆಯನ್ನು ಸ್ವಾಗತಿಸುತ್ತಾ ಈ ಹಿಂದೆ ನಡೆದ ಚರಿತ್ರ ಮತ್ತು ಘಟನೆಗಳ ನೆಲೆಯನ್ನು ನಾವು ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಭಾಷಾವಾರು ಪ್ರಾಂತದ ತತ್ವವನ್ನು ನಾವು ಈ ದಿವಸ ಬಹಳ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ವಿಚಾರಮಾಡದೆ ಇದ್ದಾಗ್ಗೂ ಕೂಡ ಬಳ್ಳಾರಿಜಿಲ್ಲೆಯ ಕೆಲವು ತಾಲ್ಲೂಕುಗಳು ಮೈಸೂರಿಗೆ ಬಂದಿರತಕ್ಕದ್ದು ಈ ಭಾಷಾವಾರು ತತ್ವದ ಪರಿಣಾಮವಾಗಿಯೇ ಎಂಬುದನ್ನು ನಾವು ಮನಗಾಣಬೇಕಾಗಿದೆ. ಈ ದಿವಸ ಆ ಆಂಧ್ರಪ್ರಾಂತ ರಚನೆ ಆಗಬೇಕಾಗಿದ್ದರೆ, ಭಾಷಾವಾರು ಪ್ರಾಂತರಚನೆಯ ತತ್ವವನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಳ್ಳದೆ ಇದ್ದಿದ್ದರೆ, ಬಹುಶಃ ತಾವು ಈ ದಿವಸ ಈ ಮಸೂದೆಯನ್ನು ಇಲ್ಲಿ ಮಂಡಿಸುತ್ತಿರಲಿಲ್ಲ, ಆದುದರಿಂದ ನಾವು ಭಾಷಾವಾರು ತತ್ವವನ್ನು ನೇರವಾಗಿ ಪ್ರಸ್ತಾಪಿಸದೆ, ಎಷ್ಟೇ ಬುದ್ಧಿವಂತಿಕೆಯಿಂದ ಇದನ್ನು ಬದಲಾಯಿಸಿ, ಮನಸ್ಸಿನಲ್ಲಿ ಮರೆಮಾಚಿಕೊಂಡಾಗ್ಗೂ ಈ ತತ್ವದ ಅಂಶ ಒಂದು ದೊಡ್ಡ ಸ್ತಂಭದಂತೆ ನಮ್ಮ ಮುಂದೆ ನಿಂತಿದೆಯೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇಂಡಿಯಾ ಸರ್ಕಾರದವರು ಈ ಭಾಷಾವಾರು ತತ್ವದ ವಿಷಯದಲ್ಲಿ ನೇರವಾಗಿ ಸುಸಂಗತವಾದ ಮತ್ತು ಸಮಂಜಸ

ವಾದ ಒಂದು ನೀತಿಯನ್ನು ಅನುಸರಿಸದೆ ಇದ್ದುದರಿಂದಲೂ, ಕೆಲವು ಸಂಭವಿಸಬಾರದಂತಹ ಘಟನೆಗಳು ಸಂಭವಿಸಿದ್ದುದರಿಂದಲೂ, ಈಗ ಈ ಆಂಧ್ರ ಪ್ರಾಂತ ರಚನೆ ಆಗಬೇಕಾಯಿತು. ನಾನು ಇದನ್ನೇ ಇನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ನಾವೀಗ ಏನೊಂದು ಭಾಷಾವಾರು ತತ್ವವೆಂದು ಹೇಳುತ್ತಿದ್ದೇವೆಯೋ ಅದು ಕಾಂಗ್ರೆಸ್ ಸಂಸ್ಥೆಯ ಅನೇಕ ತತ್ವಗಳಲ್ಲಿ ಒಂದು ದೊಡ್ಡ ತತ್ವವೆಂದು ಪರಿಗಣಿಸಿ ಈ ತತ್ವವನ್ನು ಅನುಷ್ಠಾನಕ್ಕೆ ತರಬೇಕೆಂದು ಸಂಕಲ್ಪ ಮಾಡಿದ್ದರಿಂದಲೇ ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯವನ್ನು ನಾವು ಸಂಪಾದಿಸಲು ಅವಕಾಶವಾಯಿತು. ಆದರೆ ಹಾಗೆ ಈ ಸ್ವಾತಂತ್ರ್ಯವನ್ನು ಸಂಪಾದಿಸಿದ ಕೂಡಲೇ ಈ ಭಾಷಾವಾರು ಪ್ರಾಂತಗಳ ರಚನೆ ಆಗಬೇಕೆಂದು ಜನರು ಕೇಳಿಕೊಂಡಾಗ, ಈ ಭಾಷಾವಾರು ಪ್ರಾಂತ್ಯಗಳ ರಚನೆಯ ವಿಚಾರದಲ್ಲಿ ಇಂಡಿಯಾ ಸರ್ಕಾರದವರೂ ಮತ್ತು ನಮ್ಮ ದೊಡ್ಡ ದೊಡ್ಡ ನಾಯಕರೂ ತಮ್ಮ ಉತ್ಸಾಹವನ್ನು ಪ್ರದರ್ಶಿಸಲಿಲ್ಲ.

11-30 A.M.

ಆ ತತ್ವವನ್ನು ಯಾವುದೋ ಒಂದು ರೀತಿಯಾಗಿ ಹಿಂದೆ ಹಾಕಬೇಕೆಂಬ ದೃಷ್ಟಿಯಿಂದ, ಇತರ ಮಹತ್ವದ ಪ್ರಶ್ನೆಗಳು ನಮ್ಮ ದೇಶದ ಮುಂದಿವೆಯೆಂಬ ಕಾರಣದಿಂದ ಆ ತತ್ವವನ್ನು ಆಚರಣೆಗೆ ತರಲು ಆಲಸ್ಯ ಮಾಡುತ್ತಾ ಬಂದರು. ಏನೇ ಆಗಲಿ, ಆ ಜನರ ಹಠದಿಂದ ಆಂಧ್ರ ಪ್ರಾಂತವಾದುದರ ಪರಿಣಾಮವಾಗಿ ಈಗ ಆಂಧ್ರ ಪ್ರಾಂತದ ಬಿಲ್ಲು ನಮ್ಮ ಮುಂದೆ ಬಂದಿದೆ. ಈ ವಿಷಯವಾಗಿ ಕನ್ನಡಿಗರಾದ ನಾವು ಆಂಧ್ರರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ಭಾಷಾವಾರು ರಚನೆಯ ವಿಷಯದಲ್ಲಿ ಈಗಲೂ ಕೂಡ ಇಂಡಿಯಾ ಸರ್ಕಾರದವರು ಸುವ್ಯಸ್ಥಿತವಾದ, ಸಮಂಜಸವಾದ ನೀತಿಯನ್ನು ಅವಲಂಬಿಸದೆ ಇದ್ದರೆ ನಮ್ಮ ದೇಶಕ್ಕೆ ಬಹಳ ತೊಂದರೆಯಾಗುತ್ತದೆ, ಅದರಲ್ಲೂ ದಕ್ಷಿಣ ಭಾರತಕ್ಕೇ ಬಹಳ ತೊಂದರೆಯಾಗುತ್ತದೆಂದು ನಾನು ಹೇಳಲಿಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ಈ ಸಭೆಯವರು, ಭಾಷಾವಾರು ತತ್ವದ ವಿಷಯವು ಪ್ರತ್ಯಕ್ಷವಾಗಿ ನಮ್ಮ ಮುಂದೆ ಇಲ್ಲದೆ ಇದ್ದರೂ ಕೂಡ, ಆ ವಿಷಯದಲ್ಲಿ ಈ ಸಭೆಯು ತನ್ನ ಅಭಿಪ್ರಾಯವನ್ನು ಕೊಡಲು ಬಂದಿರತಕ್ಕ ಈ ಮೊಟ್ಟಮೊದಲನೆಯ ಸಮಯವನ್ನು ಉಪಯೋಗಿಸಿಕೊಂಡು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ಮಂಡಿಸಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ. ಭಾಷಾವಾರು ಪ್ರಾಂತ ತತ್ವವನ್ನು ಅನೇಕರು ಅನೇಕ ರೀತಿಯಲ್ಲಿ ಬೇರೆ ಅರ್ಥವನ್ನು ಕೊಟ್ಟು ವಿವರಿಸಬಹುದು. ಆದರೆ ಪ್ರಜಾ ಪ್ರಭುತ್ವದ ತತ್ವ ಅನುಸರಣೆಗೆ ಬಂದ ಮೇಲೆ ಆಯಾ ದೇಶ ಆಯಾ ದೇಶಭಾಷೆಗೆ ಆಯಾ ಪ್ರಾಂತ ಭಾಷೆಗೆ ಪ್ರಾಮುಖ್ಯಸ್ಥಾನ ಕೊಡಲೇಬೇಕು. ಡೆಮಾಕ್ರಸಿ ಇರತಕ್ಕದ್ದು ಪ್ರಜೆಗಳಿಗಾಗಿರತಕ್ಕ ಆಡಳಿತ, ಪ್ರಜೆಗಳಿಂದಲೇ ನಡೆಸಲ್ಪಡತಕ್ಕ ಆಡಳಿತ. ಆದ್ದರಿಂದ ಯಾವ ಪ್ರಾಂತದಲ್ಲಿ ಪ್ರಜಾಪ್ರಭುತ್ವವನ್ನು ಆಚರಣೆಗೆ ತರುತ್ತೇವೆಯೋ ಅಲ್ಲಿ ಆ ದೇಶದ ಬಹುಭಾಗದ ಜನರು ಆಡತಕ್ಕ ಭಾಷೆಯನ್ನು ಮುಖ್ಯವಾಗಿ ಸರ್ಕಾರ ಅವಲಂಬಿಸಬೇಕಾಗುತ್ತದೆ. ಆ ದೊಡ್ಡ ತತ್ವಾನುಸರಣೆಮಾಡಿಯೇ ಇವೊತ್ತು ಆಂಧ್ರ ಪ್ರಾಂತ ರಚನೆಯಾಗಿದೆ. ಆದರೆ ನಮ್ಮ ದೇಶದಲ್ಲಿ ಭಾಷಾವಾರು ಪ್ರಾಂತ ರಚನೆಯೇ ಒಂದು ಸಮಸ್ಯೆಯಾಗಿ, ಒಂದು ದೊಡ್ಡ ಗೊಂದಲವಾಗಿ ಭಾಷೆ ಭಾಷೆಗಳಿಗೂ ಮತ್ತು ಪ್ರಾಂತ ಪ್ರಾಂತಗಳಿಗೂ ಘರ್ಷಣೆಯಾಗುವ ರೀತಿಯಲ್ಲಿ ಅದನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಾದ ನೀತಿಯಲ್ಲವೆಂದು ನಾವು ತಿಳಿದುಕೊಳ್ಳಬೇಕು. ಇಂಡಿಯಾ ದೇಶಕ್ಕೆಲ್ಲಾ, ಭಾರತೀಯರಿಗೆಲ್ಲಾ ಒಂದೇ ಒಂದು ಅನುಕೂಲವಾದ ಆಡಳಿತ ಸುಗಮವಾಗಿ ನಡೆಯಬೇಕೆಂಬ ಉದ್ದೇಶದಿಂದ, ಯಾವ ಭಾಷೆಯ ಜನರು ಬಹು ಸಂಖ್ಯೆಯಲ್ಲಿ ಒಂದು ಆಡಳಿತವನ್ನು ಕೋರುತ್ತಾರೋ ಆ ಆಡಳಿತವನ್ನು ಏರ್ಪಡಿಸಬೇಕೆಂಬ ದೃಷ್ಟಿಯಿಂದ, ಇತರ ಪ್ರಾಂತಗಳೊಡನೆ ಹೋರಾಡಿ, ಘರ್ಷಣೆಯಾಗದಿರುವ ರೀತಿಯಲ್ಲಿ ಭಾಷಾವಾರು ಪ್ರಾಂತವನ್ನು ರಚಿಸಲೇಬೇಕು; ಈ ತತ್ವವನ್ನು ಅನುಸರಿಸಲೇ ಬೇಕು. ಇದನ್ನು ಆಗ ಮಾಡಿಸುವ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಏನೇನು ಪ್ರಾಂತಗಳಾಗಬೇಕೆಂದು ನೋಡುವುದಾದರೆ, ಆಂಧ್ರ ಪ್ರಾಂತ, ತಮಿಳು ಪ್ರಾಂತ, ಮಲೆಯಾಳ ಪ್ರಾಂತ, ಕೇರಳ ಪ್ರಾಂತ, ಕನ್ನಡ ಪ್ರಾಂತ—ಇವು ಆಗಲೇಬೇಕು. ಇಂಡಿಯಾ ಸರ್ಕಾರದವರೇ ಆಗಲಿ, ನಮ್ಮ ಹಿರಿಯ ನಾಯಕರೇ ಆಗಲಿ, ಎಷ್ಟೇ ಬಡಿಗೊತ್ತಿದರೂ ಈ ತತ್ವ ಮುಂದೆಯಾದರೂ ಅನುಸರಣೆಗೆ ಬರಲೇಬೇಕಾಗುತ್ತದೆ. ಆದರೆ ಈ ತತ್ವವನ್ನು ಆಚರಣೆ ತರುವಾಗ ಜನರನ್ನು ಒಂದು ವಿಧವಾದ ಸಂಕಟಕ್ಕೆ ಗುರಿಮಾಡಿ, ಅವರ ಆಂದೋಳನವು ಒಂದು ಶಿಖರಕ್ಕೆ ಮುಟ್ಟುವಂತೆ ಮಾಡಿ ಆಗ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಬದಲಾಗಿ, ಸುಲಭವಾಗಿ ಉದ್ರೇಕ ಪರಿಸ್ಥಿತಿ ಬರುವುದಕ್ಕೆ ಮುಂಚೆಯೇ ಈ ಸಮಸ್ಯೆಯನ್ನು ಪರಿಹಾರ ಮಾಡುವುದು ಇಂಡಿಯಾ ಸರ್ಕಾರದವರ ನೀತಿಯಾಗಿರಬೇಕು. ಇದನ್ನು ನಾವು ಅವರಿಗೆ ತಿಳಿಸಬೇಕು. ದಕ್ಷಿಣ ಭಾರತದ ಸಮಸ್ಯೆ ಬಹಳ ಜಟಿಲವಾದ ಸಮಸ್ಯೆ; ಮತ್ತು ಸ್ವಾರಸ್ಯವಾದ ಸಮಸ್ಯೆಯೂ ಆಗಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ಜನರ ಸಮ್ಮತದಿಂದ ಪರಿಹಾರ ಮಾಡಬೇಕು. ಇವೊತ್ತಿನ ದಿವಸ ಬಳ್ಳಾರಿ ಜಿಲ್ಲೆಯ 7 ತಾಲ್ಲೂಕುಗಳ ವಿಷಯವನ್ನು ನಾವು ಆಲೋಚನೆಮಾಡುವಾಗ, ಈ ಏಳು ತಾಲ್ಲೂಕುಗಳೂ ನಮಗೆ ಬರುವಾಗ, ಈ ಕನ್ನಡ ಜನರನ್ನು ಒಂದು ಭಾಷಾ ದೃಷ್ಟಿಯಿಂದ ಒಂದುಗೂಡಿಸುವ ಪ್ರಯತ್ನ ನಡೆಸುವಾಗ, ಈ ಸಭೆಯಲ್ಲಿರತಕ್ಕ ಅನೇಕರು ಹಾಗೂ ಸಭೆಯ ಹೊರಗಿರತಕ್ಕ ಅನೇಕ ಕನ್ನಡ ಜನರು ಒಂದು ಪ್ರಾಂತ ನಿರ್ಮಾಣವಾಗಬೇಕು, ಕನ್ನಡಕ್ಕೆ ಪ್ರಾಶಸ್ತ್ಯ ನಮ್ಮ ದೇಶದಲ್ಲಿ ಹೆಚ್ಚಬೇಕು ಎಂದು ಆಂದೋಳನ ನಡೆಸುತ್ತಿದ್ದಾರೆ; ಪ್ರಚಾರ ನಡೆಸುತ್ತಿದ್ದಾರೆ. ಈ ದೃಷ್ಟಿಯಿಂದ ಈ ಸಮಸ್ಯೆ ಇವೊತ್ತಲ್ಲ ಮುಂದಾದರೂ ಪರಿಹಾರವಾಗಲೇ ಬೇಕು. ಮೈಸೂರು ಪ್ರಾಂತ ಇನ್ನೂ ದೊಡ್ಡದಾಗಿ ಕನ್ನಡ ಪ್ರಾಂತವಾಗಬೇಕೆಂಬುದು ನನ್ನ ಅಭಿಲಾಷೆ. ಈ ಸಮಸ್ಯೆಯ ಪರಿಹಾರದಲ್ಲಿ ಅನೇಕರು ದೊಡ್ಡ ಗೊಂದಲವನ್ನುಂಟು ಮಾಡಿದ್ದಾರೆ. ಏನೆಂದರೆ—ಮೈಸೂರು ಮೈಸೂರಾಗಿಯೇ ಉಳಿಯಬೇಕು, ಉಳಿದ ಕನ್ನಡ ಪ್ರಾಂತಗಳೇ ಸೇರಿ ಒಂದು ಕನ್ನಡ ಪ್ರಾಂತ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ. ಇದು ಖಂಡಿತವಾಗಿಯೂ ದೂರದೃಷ್ಟಿಯಲ್ಲ, ರಾಜನೀತಿಯಲ್ಲ, ಭಾಷಾಭಿಮಾನವಾಗಲಿ ದೇಶಾಭಿಮಾನವಾಗಲಿ ಅಲ್ಲ. ಆದ್ದರಿಂದಲೇ ನಾನು ಹೇಳುವುದು, ಈ ಸಮಸ್ಯೆಯನ್ನು ಬಹಳ ಧೈರ್ಯವಾಗಿ ಬಹಳ ರಾಜನೀತಿಯಿಂದ ಪರಿಹಾರ ಮಾಡಬೇಕು. ಇವೊತ್ತಿನ ದಿವಸ ಈ ಬಳ್ಳಾರಿಯ 7 ತಾಲ್ಲೂಕುಗಳನ್ನು ನಮಗೆ ಸೇರಿಸುವ ಕಾಲದಲ್ಲಿ ಈ ಸಮಸ್ಯೆಯನ್ನು

(ಶ್ರೀ ಪಿ. ಆರ್. ರಾಮಯ್ಯ.)

ಸಭೆಯ ಮುಂದೆ ಈಗಲೇ ನಾವು ಪರಿಶೀಲಿಸದೆ ಇದ್ದರೂ ಕೂಡ, ಈ ಸಮಸ್ಯೆ ನಮ್ಮ ಮುಂದೆ ಇದ್ದೇ ಇದೆಯೆಂದು ತಿಳಿದು ನಾವು ಚೆನ್ನಾಗಿ ಪರಿಗಣಿಸಬೇಕಾಗಿದೆ. ಈ ಸಂದರ್ಭದಲ್ಲಿ ಬಳ್ಳಾರಿ ತಾಲ್ಲೂಕಿನ ಜನಗಳು ಸೇರುವುದನ್ನು ಸ್ವಾಗತಿಸುತ್ತಾ ಇಂಡಿಯಾ ಸರ್ಕಾರದವರಿಗೆ ಇನ್ನು ಕೆಲವು ಮನವಿಗಳನ್ನು ಮಾಡಿಕೊಳ್ಳಬೇಕಾಗಿದೆ.

ಮಡಕಶಿರ, ಕೊಳ್ಳೇಗಾಲ, ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳೂ ಮತ್ತು ಹತ್ತಿರದಲ್ಲೇ ಇರುವ ಇತರ ಕನ್ನಡ ಭಾಗಗಳೂ ನಮ್ಮ ಮೈಸೂರಿಗೆ ಸೇರಲೇಬೇಕು. ಅದನ್ನು ಬೇಗ ಆಗಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಲ್ಲಿ ಯಾವುದೊಂದು ಗೊಂದಲವೂ ಇಲ್ಲ. ಯಾವ ವ್ಯಾಜ್ಯವೂ ಇಲ್ಲ. ಆದರೆ ಈ ಸಮಸ್ಯೆಯ ಪರಿಹಾರದಲ್ಲಿ ಈ ಬಳ್ಳಾರಿಯು ನಮ್ಮ ಮೈಸೂರಿಗೆ ಸೇರುವ ಸಂದರ್ಭದಲ್ಲಿ ಕೆಲವು ಗೊಂದಲಗಳಾದುವು ಎಂದು ವರದಿಯಾಗಿದೆ. ಈ ತೊಂದರೆಗಳೂ ತಾತ್ಕಾಲಿಕವಾದವೇ ಹೊರತು ಅವು ದೀರ್ಘವಾಗಿ ಬಹಳ ಕಾಲ ಉಳಿಯತಕ್ಕವಲ್ಲ. ಬಳ್ಳಾರಿಯ ಚರಿತ್ರೆಯನ್ನು ಪರಿಗಣಿಸಿದರೆ, ಬಳ್ಳಾರಿಯು ಬಹುಕಾಲದಿಂದಲೂ ಕನ್ನಡದ ಭಾಗವಾಗಿತ್ತು. ಏನೋಕಾರಣಗಳಿಂದ ಸ್ವಲ್ಪಕಾಲ ಬೇರೆಯಾಗಿತ್ತು. ಈಗ ಪುನಃ ಬಂದಿವೆಯೆಂಬುದನ್ನು ನಾವು ಅರಿಯಬೇಕು. ಆದುದರಿಂದ ಈಗ ಹೇಳಿರತಕ್ಕ ತೊಂದರೆಗಳು ತಾತ್ಕಾಲಿಕವಾದುವು ಎಂಬುದನ್ನು ತಿಳಿದು ನಾವು ಅದನು ಹೆಚ್ಚಾಗಿ ಮನಸ್ಸಿಗೆ ಹೆಚ್ಚಿಕೊಳ್ಳಬೇಕಾಗಿಲ್ಲ. ಮುಖ್ಯಮಂತ್ರಿಗಳು ಹೇಳಿದಹಾಗೆ, ಬೇರೊಂದು ಬೌಂಡರಿ ಕಮಿಷನನ್ನಾಗಲಿ, ಯಾವ ಹೊಸ ಸಂಸ್ಥೆಯನ್ನಾಗಲಿ ನೇಮಿಸಿ ಬಳ್ಳಾರಿಯ ಸಮಸ್ಯೆಯನ್ನು ಪುನರ್ವಿಮರ್ಶೆ ಮಾಡುವುದು ಯುಕ್ತವಲ್ಲ. ಈ ರೀತಿಯಾಗಿ ಒಂದು ಸಾರಿ ಒಂದು ಜನ ಒಂದು ಪ್ರಾಂತಕ್ಕೆ ಸೇರಿದ ಮೇಲೆ ಪುನಃ ಅವರು ಅಲ್ಲೇ ನಿಲ್ಲುವವರೋ ಅಲ್ಲವೋ ಎಂಬ ಸಂದೇಹವನ್ನು ಉಂಟುಮಾಡತಕ್ಕದು, ಜಿಜ್ಞಾಸೆಗೆ ಎಡೆಗೊಡುವುದು ಸೂಕ್ತವಲ್ಲ. ಅದರಿಂದ ಆಡಳಿತದ ಸುಭದ್ರತೆಗೆ ತೊಂದರೆಯಾಗುತ್ತದೆ. ಆಡಳಿತದ ಭದ್ರತೆಯ ದೃಷ್ಟಿಯಿಂದ ಒಂದಾವರ್ತಿ ಒಂದು ಪ್ರಾಂತ ಒಂದು ಕಡೆಗೆ ಸೇರಿದಮೇಲೆ ಅಲ್ಲೇ ಅದು ಸ್ಥಿರವಾಗಿ ನಿಲ್ಲಬೇಕು. ಪುನರ್ವಿಮರ್ಶೆ ಮಾಡತಕ್ಕಗೊಡವೆಗೆ ಇಂಡಿಯಾ ಸರ್ಕಾರದವರು ಹೋಗಕೂಡದೆಂದು ನಾನು ಹೇಳುತ್ತೇನೆ.

ಈಗ ಈ ಬಳ್ಳಾರಿ ತಾಲ್ಲೂಕು ಸೇರುವ ಸಂದರ್ಭದಲ್ಲಿ ನಡೆಸತಕ್ಕ ಆಡಳಿತ ವಿಧಾನ, ಮತ್ತಿತರ ಬದಲಾವಣೆಗಳ ವಿಷಯದಲ್ಲಿ ನಾನೀಗ ಪ್ರಸ್ತಾಪಮಾಡುವುದಿಲ್ಲ. ಆದರೆ ಒಂದೇ ಒಂದು ವಿಷಯವನ್ನು ನಾನು ಹೇಳಬೇಕಾಗುತ್ತದೆ. ಅದೇನೆಂದರೆ, ನಾವು ಸ್ವಂತವಾಗಿ ಮೈಸೂರಿನವರು ಪ್ರಯತ್ನಪಡಲಿ ಪಡದೆಯಿರಲಿ, ತಾನಾಗಿಯೇ ಅಪ್ರಾರ್ಥಿತವಾಗಿ ಬಳ್ಳಾರಿ ತಾಲ್ಲೂಕು ನಮಗೆ ಸೇರುತ್ತಿದೆ. ಅದೇ ರೀತಿ ಇತರ ಕನ್ನಡ ಪ್ರದೇಶಗಳೂ ನಮ್ಮ ಮೈಸೂರಿಗೆ ಸೇರತಕ್ಕ ಅದೃಷ್ಟ ನಮಗೆ ಬರಲೆಂದು ನಾನು ಹಾರೈಸುತ್ತೇನೆ. ನಾವು ಹೋಗಿ ಯಾವ ಬಲಾತ್ಕಾರವನ್ನಾಗಲಿ ಒತ್ತಾಯವನ್ನಾಗಲಿ ಮಾಡಲಿಲ್ಲ, ಇಂಡಿಯಾ ಸರ್ಕಾರವನ್ನು ಕೇಳಿಕೊಳ್ಳಲಿಲ್ಲ ಬಳ್ಳಾರಿ ತಾಲ್ಲೂಕುಗಳನ್ನು ನಮಗೆ ಕೊಡಿ ಎಂದು. ಆದರೆ ಇಂಡಿಯಾ ಸರ್ಕಾರದವರೇ ಯೋಚನೆಮಾಡಿ, ಈ ಪ್ರಾಂತ ಮೈಸೂರಿಗೆ ಸೇರತಕ್ಕದ್ದು ನ್ಯಾಯವಾಗಿದೆ. ಮೈಸೂರಿಗೆ ಸೇರಿದರೆ ಆ ತಾಲ್ಲೂಕುಗಳ ಪ್ರಜೆಗಳಿಗೂ ಅನುಕೂಲವೆಂದು ತಾವೇ ಯೋಚನೆಮಾಡಿ ಆ ತಾಲ್ಲೂಕುಗಳನ್ನು ಇಲ್ಲಿಗೆ ಸೇರಿಸಿದ್ದಾರೆ. ಇದು ಸಂತೋಷದ ವಿಷಯ.

ಇನ್ನೊಂದು ವಿಷಯವನ್ನು ಪ್ರಸ್ತಾಪಮಾಡಿ, ನನ್ನ ಭಾಷಣವನ್ನು ಮುಗಿಸುತ್ತೇನೆ. ನಾವು ಹಿಂದಿನ ವೈಭವದಲ್ಲಿ ಆಸಕ್ತಿಯುಳ್ಳವರು. ಗತವೈಭವವನ್ನು ನೆನೆದುಕೊಂಡು ಎಷ್ಟೋವೇಳೆ ಮೈಮರೆಯುತ್ತೇವೆ. ಈ ಹೊತ್ತಿನ ದಿವಸ ಬಳ್ಳಾರಿ ಜಿಲ್ಲೆಯಲ್ಲಿರುವ ಹೊಸಪೇಟೆ ತಾಲ್ಲೂಕಿನಲ್ಲೇ ಪ್ರಾಚೀನ ವಿಜಯನಗರದ ನಿವೇಶನವಿರುವುದು. ವಿರೂಪಾಕ್ಷ ದೇವಾಲಯ, ತುಂಗಭದ್ರೆಯ ಸುಂದರದೃಶ್ಯ ಇವೆಲ್ಲವೂ ಇರುವುದು ಅಲ್ಲೇ. ಇದೆಲ್ಲವೂ ತಮ್ಮ ಸಂಸ್ಥಾನಕ್ಕೆ ಸೇರುವುದು ದೇವರ ಕೃಪೆ ಎಂದು ಭಾವಿಸುತ್ತೇನೆ. ಆದುದರಿಂದ ಈ ವಿಷಯದಲ್ಲಿ ತಿದ್ದುಪಡಿಗಳೇನೇ ಇದ್ದರೂ ಕೂಡ ಮುಖ್ಯವಾಗಿ ಒಂದಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಭಾಷಾವಾರು ಪ್ರಾಂತ ರಚನೆಯ ಸಮಸ್ಯೆ ನಮ್ಮ ಮುಂದೆ ಇದ್ದೇ ಇದೆ. ಇದನ್ನು ಸುಗಮವಾಗಿ, ಸಾಮರಸ್ಯದಿಂದ ಪರಿಹಾರ ಮಾಡಬೇಕು. ಆಂಧ್ರ ಮತ್ತು ತಮಿಳು ಪ್ರದೇಶಗಳಲ್ಲಿರುವವರು ರಾಜನೀತಿಯಿಂದ ವರ್ತಿಸಬೇಕಾಗುತ್ತದೆ. ಸರಹದ್ದಿನಲ್ಲಿರುವ ಪ್ರಾಂತಗಳಲ್ಲಿ ಎರಡು ಭಾಷೆಗಳಲ್ಲಿಯೂ ಸರ್ಕಾರದ ಆಡಳಿತ ನಡೆದರೆ ಈ ಸಮಸ್ಯೆ ಬಹಳ ಮಟ್ಟಿಗೆ ಜಟಿಲತೆಯನ್ನು ಕಳೆದುಕೊಂಡು ಸುಲಭವಾಗುತ್ತದೆ. ಇಂಡಿಯಾ ದೇಶ ಬಹು ಭಾಷೆಗಳ ದೇಶ. ಎಷ್ಟೇ ಭಾಷಾವಾರು ಪ್ರಾಂತಗಳನ್ನು ಮಾಡಲಿ, ಎಷ್ಟೇ ಭಾಷೆಗಳ ಮೇಲೆ ಪ್ರತ್ಯೇಕ ಪ್ರದೇಶಗಳನ್ನು ಮಾಡಲಿ, ನದಿಗಳು ಸೇರುವ ಹಾಗೆ ಎರಡು ಭಾಷೆಗಳು ಸಮ್ಮಿಳಿತವಾಗಿರುತ್ತವೆ. ಆದುದರಿಂದ ಎರಡು ಭಾಷೆಗಳಿಗೂ ಸಂರಕ್ಷಣೆ ಇರಬೇಕು. ಎರಡು ಭಾಷೆಗಳನ್ನಾಡುವ ಜನರಿಗೂ ರಕ್ಷಣೆಯಿರಬೇಕು. ಉದಾಹರಣೆಗೆ ಬೆಳಗಾಂನಲ್ಲಿ ಮರಾಠಿಗರಿಗೂ ಕನ್ನಡಿಗರಿಗೂ ಹಣಾಹಣಿ ಜಗಳ. ಬಳ್ಳಾರಿ ತಾಲ್ಲೂಕಿಗಿಂತ ಸಾವಿರಪಾಲು ಜಗಳವಾಗುತ್ತಿದೆ. ಹೊಡೆದಾಟವಾಗುತ್ತಿದೆ. ಈ ಹೊಡೆದಾಟ ತಪ್ಪಲು ಕನ್ನಡಕ್ಕೆ ಎಷ್ಟು ಪ್ರಾಶಸ್ತ್ಯ ಕೊಡುತ್ತಾರೋ, ಅಷ್ಟೇ ಪ್ರಾಶಸ್ತ್ಯವನ್ನು ಮರಾಠಿಗೂ ಕೂಡ ಕೊಡಬೇಕು ಅದೇ ಪ್ರೋತ್ಸಾಹವನ್ನು ಕೊಡಬೇಕು. ನಮ್ಮ ರಾಜ್ಯಾಂಗದಲ್ಲಿಯೂ ಕೂಡ ಭಾಷೆಯ ವಿಷಯದಲ್ಲಿ ಯಾವ ಪ್ರದೇಶದಲ್ಲೇ ಆಗಲಿ ಆ ಪ್ರಾಂತದ ಭಾಷೆ ಯಾವುದೇ ಆಗಲಿ ಅಲ್ಲಿರುವ ಒಂದು ಬೇರೆ ಭಾಷೆಯ ಜನರು ತಮ್ಮ ಮಾತೃಭಾಷೆಯಲ್ಲಿ ಪ್ರಾಥಮಿಕ ಶಾಲೆಯನ್ನು ಕೊಡಬೇಕೆಂದು ಕೇಳಿದರೆ ಕೊಡಬೇಕೆಂದು ಹೇಳಿದೆ. ನಮ್ಮ ರಾಜ್ಯಾಂಗದಲ್ಲಿ ಎಲ್ಲಾ ಭಾಷೆಗಳಿಗೂ ಸಂರಕ್ಷಣೆಯಿದೆ. ಮುಖ್ಯವಾಗಿ ಸರಹದ್ದು ಪ್ರಾಂತಗಳಲ್ಲಿ ಎರಡು ಭಾಷೆಗಳಿಗೂ ರಕ್ಷಣೆ ಮತ್ತು ಪ್ರೋತ್ಸಾಹವನ್ನು ಕೊಟ್ಟರೆ ಅನುಕೂಲವಾಗುತ್ತವೆ. ಈ ಸಮಸ್ಯೆ ಇರುವುದಿಲ್ಲ.

ಕೊನೆಯದಾಗಿ, ಈ ಸಮಸ್ಯೆಯನ್ನು ನಾವು ಗೊಂದಲಕ್ಕೀಡುಮಾಡದೆ ಪರಿಹಾರಮಾಡಬೇಕು. ಮೊಟ್ಟಮೊದಲನೆಯದಾಗಿ ನಾವು ಗಮನಿಸಬೇಕು, ಮೈಸೂರು ಸಂಸ್ಥಾನದಲ್ಲಿ ಎಲ್ಲಾ ಭಾಷೆಗಳನ್ನಾಡುವವರೂ ಇದ್ದಾರೆ. ತೆಲುಗರು, ತಮಿಳರು ಇದ್ದಾರೆ ಈಚೆಗೆ ಬೆಂಗಳೂರು ನಗರಕ್ಕೆ ಮಲೆಯಾಳಿಗಳೂ ಜಾಸ್ತಿ ಬರುತ್ತಿದ್ದಾರೆ. ಭಾಷೆಗಳ ಹೋರಾಟ, ಜಗಳ ಮೈಸೂರು ಸಂಸ್ಥಾನದಲ್ಲಿಲ್ಲ. ಆದುದರಿಂದ ಮೈಸೂರು ಮಾದರಿ ಸಂಸ್ಥಾನ ಎನಿಸಿಕೊಂಡಿದೆ. ಸರಹದ್ದಿನಲ್ಲಿರುವ ಮರಾಠಿಗರೂ, ತೆಲುಗರೂ, ತಮಿಳರೂ ಮೈಸೂರಿಗೆ

ಸೇರಿದರೆ ಅವರ ಸಂಸ್ಕೃತಿ ಮತ್ತು ಭಾಷೆಗೆ ಚ್ಯುತಿಯಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಭಾಷಾವಾರು ಪ್ರಾಂತ ರಚನೆಯ ಕ್ರಮದಿಂದಲೂ ಕೂಡ ಬಳ್ಳಾರಿ ಜಿಲ್ಲೆ ನಮಗೆ ಸೇರುವುದನ್ನು ಸ್ವಾಗತಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಮಸೂದಾ ಕಾನೂನನ್ನು ಸ್ವಾಗತಿಸುತ್ತಾ ಒಂದರೆಡು ವಿಚಾರಗಳನ್ನು ಪ್ರಸ್ತಾಪಮಾಡಬೇಕೆಂಬುದು ನನ್ನ ಉದ್ದೇಶ. ಇಲ್ಲಿಯವರೆಗೆ ಭಾಷಣಮಾಡಿದಂಥ ನಮ್ಮ ಸ್ನೇಹಿತರಾದ ಶ್ರೀ ಪಿ. ಅರ್. ರಾಮಯ್ಯನವರು ಭಾಷೆಯ ವಿಚಾರದಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಮಾಡಿದ್ದಾರೆ. ಈಗ ಮುಖ್ಯವಾಗಿ ಉದ್ಭವಿಸಿರುವ ಸಮಸ್ಯೆ ಈ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಸಂಸ್ಥಾನಕ್ಕೆ ಯಾವ ಆಧಾರದ ಮೇಲೆ ಸೇರಿಸಿದ್ದಾರೆಂಬುದು. ಹೆಚ್ಚಾಗಿ ಈ ಪ್ರದೇಶದಲ್ಲಿ ಕನ್ನಡ ಮಾತನಾಡುವವರಿದ್ದಾರೆ, ಆದುದರಿಂದ ಇದನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕಾಯಿತು, ಎನ್ನತಕ್ಕ ಒಂದು ಅಂಶ ಶ್ರೀ ರಾಮಯ್ಯನವರ ಭಾಷಣದಿಂದ ವ್ಯಕ್ತವಾಗುತ್ತದೆ.

ಈ ಪ್ರದೇಶವನ್ನು ಮೈಸೂರಿಗೆ ಸೇರಿಸುವುದಕ್ಕೆ ಮುಖ್ಯವಾಗಿ ಭಾಷೆಯೊಂದೇ ಕಾರಣವಲ್ಲ. ಮೈಸೂರು ಸಂಸ್ಥಾನಕ್ಕೆ ಆ ಜಿಲ್ಲೆಯು ಒಂದು ಅಂಗವಾಗಿ ಪರಿಣಮಿಸಿರುವ ದೃಷ್ಟಿಯಿಂದ ಹೀಗೆ ಮಾಡಿದೆ. ಆಂಧ್ರ ದೇಶ ನಿರ್ಮಾಣವಾದ ಮೇಲೆ ಒಂದು ದ್ವೀಪದಂತೆ ಉಳಿಯತಕ್ಕ ಈ ಭಾಗ ಮದರಾಸಿನಲ್ಲಿ ಉಳಿಯಬೇಕೇ ಅಥವಾ ಬೊಂಬಾಯಿ ಪ್ರಾಂತದಲ್ಲಿ ಉಳಿಯಬೇಕೇ ಅಥವಾ ಮೈಸೂರಿಗೆ ಸೇರಬೇಕೇ ಎಂಬ ಜಿಜ್ಞಾಸೆಯುಂಟಾಗಿ ಕೊನೆಗೆ ಮೈಸೂರಿಗೇ ಸೇರಿಸಿದರೆ ರಾಜ್ಯಾಡಳಿತ ದೃಷ್ಟಿಯಿಂದ ಬಹಳ ಸಮರ್ಪಕವಾಗಿರುತ್ತದೆಂಬ ದೃಷ್ಟಿ ಇಂಡಿಯಾ ಸರ್ಕಾರದ ಗಮನಕ್ಕೆ ಬಂದು ಬಳ್ಳಾರಿಯ ಈ ಏಳು ತಾಲ್ಲೂಕುಗಳನ್ನು ಇಲ್ಲಿಗೆ ಸೇರಿಸಿದ್ದಾರೆ. ಪೂರ್ವದಲ್ಲಿ ಯಾವ ಯುದ್ಧವೂ ರಕ್ತಪಾತವೂ ಇಲ್ಲದೆ ರಾಜ್ಯ ಸಂಪಾದಿಸುತ್ತಿದ್ದರಂತೆ. ಮೈಸೂರಿಗೆ ತಾನಾಗಿಯೇ ಈ ಪ್ರದೇಶ ಬಂದು ಸೇರಿದೆ. ಇದರಿಂದ ನಮ್ಮ ರಾಜ್ಯ ವಿಸ್ತಾರವಾಯಿತು ಎಂಬುದು ಒಂದು ವಾದ. ಇದರ ಜೊತೆಗೆ ಬಳ್ಳಾರಿ ಮೈಸೂರು ಸಂಸ್ಥಾನಕ್ಕೆ ಸೇರಿತು, ಇದೇ ರೀತಿ ಕರ್ಣಾಟಕ ಪ್ರಾಂತ ನಿರ್ಮಾಣವಾಗಬಹುದು ಎನ್ನುವವರೆಗೆ ಹೋಗುವ ಮಹನೀಯರೂ ಇದ್ದಾರೆ. ಮುಖ್ಯವಾಗಿ ಇಲ್ಲಿ ಯೋಚಿಸಬೇಕಾದ ವಿಚಾರ, ಯಾವ ಪ್ರಾಂತವನ್ನೇ ಮಾಡಲಿ ಭಾಷೆಯ ಆಧಾರ ಮುಖ್ಯವೆ ಅಥವಾ ಆ ಪ್ರದೇಶದಲ್ಲಿ ವಾಸವಾಗಿರತಕ್ಕ ಪ್ರತಿಯೊಬ್ಬ ವ್ಯಕ್ತಿಯ ಅಭಿಪ್ರಾಯ ಮುಖ್ಯವೆ ಎಂಬುದನ್ನು ನಾವು ಯೋಚಿಸಬೇಕಾಗಿದೆ.

ಸಾಮಾನ್ಯವಾಗಿ ನಾವು ವಯಸ್ಕರ ಮತದಾನ ಪದ್ಧತಿಯ ಪ್ರಕಾರ ಚುನಾವಣೆಯನ್ನು ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ ಒಂದಂಶವನ್ನು ನಾವು ಒಪ್ಪಿಕೊಂಡ ಮೇಲೆ ಆ ಪ್ರಾಂತದ ಪ್ರಜೆಗಳು ಪ್ರಾಂತಗಳನ್ನು ಯಾವ ಆಧಾರದ ಮೇಲೆ ರಚನೆಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ, ಅವರು ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ಥಿತಿಯಲ್ಲಿದ್ದಾರೆಯೆ ಇಲ್ಲವೆ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಈಗ ನಾವು ಈ ಒಂದು ಅಂಶವನ್ನು ಗಣನೆಗೆ ತೆಗೆದುಕೊಂಡಿಲ್ಲ. ಪ್ರತಿಯೊಬ್ಬ ಓಟುಕೊಡುವ ಅಧಿಕಾರವಿರತಕ್ಕ ವ್ಯಕ್ತಿಯೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಆಗಬೇಕೆಂದರೆ ಅದು ಸಾಧ್ಯವಿಲ್ಲದ ಮಾತು. ಹಾಗಾದರೆ ಈಗ ಕನ್ನಡ ಪ್ರಾಂತ ನಿರ್ಮಾಣವಾಗಬೇಕೇ ಅಥವಾ ಬೇಡವೇ ಎನ್ನುವ ಒಂದು ನಿರ್ಧಾರವನ್ನು ಮಾಡುವ ಸಮಯದಲ್ಲಿ ನಮಗೆ ಹಾಗೆ ಹೊಸದಾಗಿ ರಚಿತವಾಗುವುದರ ಬಗ್ಗೆ ಬಂದು ಸೇರತಕ್ಕ ಪ್ರಾಂತಗಳಲ್ಲಿರತಕ್ಕ ಆ ಹೊಸಬರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಶಕ್ತಿ ಇಲ್ಲದೆ ಇರುವಾಗ ಅಂಥ ಜನರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವರೆಗೂ ಈ ರೀತಿ ಒಂದು ಭಾಷೆಯ ಆಧಾರದ ಮೇಲೆ ನಿರ್ಮಾಣವಾಗಬೇಕಾಗಿರುವ ಪ್ರಾಂತ ರಚನೆಯಾಗದಂತೆ ತಪೆಗಟ್ಟುವುದಕ್ಕೆ ಸಾಧ್ಯವೇ ಎಂಬ ಈ ಒಂದು ಪ್ರಶ್ನೆಯೂ ಉದ್ಭವಿಸುತ್ತದೆ. ಆದರೆ ನನ್ನ ವಾದ ಇದೂ ಅಲ್ಲ. ನನ್ನ ವಾದವೇನೆಂದರೆ, ಭಾರತದಲ್ಲಿ ಯಾವ ಒಂದು ಪ್ರಾಂತವನ್ನು ನಿರ್ಮಾಣಮಾಡಬೇಕಾಗಿದ್ದರೂ ಕೂಡ ಹಾಗೆ ನಿರ್ಮಿತವಾಗುವ ಪ್ರಾಂತದಲ್ಲಿ ಎಲ್ಲ ಭಾಷೆಗಳನ್ನಾಡತಕ್ಕ ಜನರೂ ಇದ್ದೇ ಇರುತ್ತಾರೆ. ಹಾಗೆ ಆ ಪ್ರದೇಶದಲ್ಲಿ ನೆಲೆಸಿರತಕ್ಕ ನಾನಾ ಭಾಷೆಗಳನ್ನು ಆಡುವ ಜನರಿಗೆಲ್ಲಾ ಅವರಿಗೆ ಬೇಕಾದಂಥ ಸೌಕರ್ಯಗಳನ್ನು ಒದಗಿಸಬೇಕಾದದ್ದು ನಮ್ಮ ಕರ್ತವ್ಯವಾಗಿರುತ್ತದೆ. ಈಗ ಉದಾಹರಣೆಗೆ ಈ ಬಳ್ಳಾರಿ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಆ ಬಳ್ಳಾರಿ ಜಿಲ್ಲೆಯಲ್ಲಿ ಮೈಸೂರಿಗೆ ಸೇರತಕ್ಕ ಆ ಏಳು ತಾಲ್ಲೂಕಿನಲ್ಲಿ ಕನ್ನಡ ಭಾಷೆಯನ್ನಾಡತಕ್ಕ ಜನರೇ ಹೆಚ್ಚಾಗಿರುವುದರಿಂದ, ಆ ಏಳು ತಾಲ್ಲೂಕುಗಳನ್ನು ಎಲ್ಲಿಗೆ ಸೇರಿಸಬೇಕೆಂಬ ಪ್ರಶ್ನೆ ಉದ್ಭವಿಸಿ, ಕಡೆಗೆ ಅವು ಮಿಶ್ರಾರವರ ಅವಾರ್ಡ್ ಪ್ರಕಾರ ಮೈಸೂರಿಗೆ ಸೇರಿಸಬೇಕೆಂದು ತೀರ್ಮಾನವಾಗಿದೆ. ಹಾಗೆ ಒಂದು ತೀರ್ಮಾನವಾದನಂತರ ಅಲ್ಲಿ ಉಂಟಾದ ಪರಸ್ಥಿತಿ ಏನೆಂಬುದನ್ನು ಈಗಾಗಲೇ ನಾವೆಲ್ಲರೂ ಮನಗಂಡವರಾಗಿದ್ದೇವೆ. ಈ ರೀತಿಯಾಗಿ ಯಾವ ಒಂದು ಪ್ರಾಂತ ನಿರ್ಮಾಣವಾಗಬೇಕಾಗಿದ್ದರೂ ಅದು ತಕ್ಷಣವೇ ಆಗದೆ, ಹೀಗೆ ಅಲ್ಲಿರತಕ್ಕ ಜನರ ಅಭಿಪ್ರಾಯಗಳನ್ನು ಶೇಖರಣೆಮಾಡಿ ಮಾಡಬೇಕೆಂದು ಹೇಳುವಾಗ ಇಂಥ ಜಿಜ್ಞಾಸೆಗಳು ಹುಟ್ಟಿಯೇ ಹುಟ್ಟುತ್ತವೆ. ಇವುಗಳಿಗೆ ಕಾರಣವೇನೆಂದರೆ ಜನರಿಗೆ ಭಾಷೆಯ ಮೇಲೆ ಎಷ್ಟರಮಟ್ಟಿಗೆ ಒಂದು ಅಭಿಮಾನವಿರುತ್ತದೆಂದರೆ, ಅವರ ಮಾತಾಪಿತೃಗಳ ಮೇಲೆ ಅವರಿಗೆ ಎಷ್ಟು ಅಭಿಮಾನವಿರುತ್ತದೆಯೋ ಅಷ್ಟೇ ಅಭಿಮಾನ ಇದರ ಮೇಲೂ ಇರುತ್ತದೆ. ಅಂದ ಮೇಲೆ ಭಾಷಾಧಾರವನ್ನೇ ಒಂದು ಮೂಲವನ್ನಾಗಿಟ್ಟುಕೊಂಡು ಯಾವ ಒಂದು ಪ್ರಾಂತವನ್ನೇ ರಚಿಸಬೇಕೆಂದು ಕೇಳುವುದಾಗಲಿ ಅಥವಾ ಅದಕ್ಕಾಗಿ ಒಂದು ಹೋರಾಟವನ್ನು ನಡೆಸುವುದೇ ಆಗಲಿ ಅದು ನ್ಯಾಯವಲ್ಲ ಎಂಬುದು ಇದರಲ್ಲಿ ಎದ್ದು ಕಾಣುತ್ತದೆ. ಏಕೆಂದರೆ ಈಗಾಗಲೇ ಜಾತ್ಯಾಧಾರಗಳ ಮೇಲೆ ನಿರ್ಮಾಣವಾದ ಪಾಕೀಸ್ಥಾನ, ಹಿಂದೂಸ್ಥಾನಗಳ ವೈಖರಿಯೇನೆಂಬುದನ್ನು ನಾವು ಕಂಡುಕೊಂಡಿದ್ದೇವೆ. ಈ ವೈಖರಿಯ ಅಂಶ ನಮಗೆ ಎಲ್ಲಿಯವರೆಗೆ ವ್ಯಕ್ತವಾಗಿದೆಯೆಂದರೆ—ಲಕ್ಷಾಂತರ ಸಂಸಾರಗಳು ಹಾಳಾಗಿ ಹೋದಂಥ ಒಂದು ಸ್ಥಿತಿಯುಂಟಾಗಿ ಅದರ ಬಿಸಿಯನ್ನು ನಾವಿನ್ನೂ ಕಳೆದುಕೊಳ್ಳುವ ಸ್ಥಿತಿಗೇ ಬಂದಿರುವುದಿಲ್ಲ. ಎಂದ ಮೇಲೆ ಈ ರೀತಿ ಭಾಷಾವಾರು ಆಧಾರದ ಮೇಲೆ ಪ್ರಾಂತಗಳನ್ನು ನಿರ್ಮಾಣಮಾಡಿದಲ್ಲಿ ಅದರ ಸ್ಥಿತಿ ಏನಾಗುತ್ತದೆ, ಅದರಲ್ಲಿಯೂ ಮುಖ್ಯವಾಗಿ ಬಡಜನರ ಕಷ್ಟ ಎಷ್ಟರ ಮಟ್ಟಿಗೆ ಉದ್ಭವವಾಗುತ್ತದೆ ಎಂಬುದನ್ನೆಲ್ಲಾ ನಾವು

(ಶ್ರೀ ಬಿ. ಟಿ. ಕೆಂಪರಾಜ್.)

ಆಲೋಚಿಸಬೇಕಾಗಿದೆ. ಆದರೆ ಅನೇಕ ಸಂದರ್ಭಗಳಲ್ಲಿ ಮುಖಂಡರುಗಳಾದಂಥವರ ವಾದಗಳನ್ನು ಸಹ ಪ್ರತಿಯೊಬ್ಬ ವ್ಯಕ್ತಿಯೂ ಒಪ್ಪಿಕೊಳ್ಳಬೇಕೆಂದು ಕೇಳಿದಾಗ ಇಂಥ ಅನೇಕ ವಿಷಯಗಳಿಗೆ ಜನರ ಒಪ್ಪಿಗೆ ದೊರೆಯುವುದು ಬಹಳ ಕಷ್ಟ ಮತ್ತು ಸಾಧ್ಯವೂ ಆಗಲಾರದು. ಏಕೆಂದರೆ ನಮಗೆ ಕರ್ಣಾಟಕ ಏಕೀಕರಣ ಬೇಕು, ಎಲ್ಲಿ ಕನ್ನಡ ಆಡತಕ್ಕ ಜನರಿದ್ದಾರೋ ಅವರಿಗೆ ಒಂದು ಕನ್ನಡ ಪ್ರಾಂತಬೇಕು, ಎಲ್ಲಿ ಮಹಾರಾಷ್ಟ್ರರು ಇದ್ದಾರೋ ಅವರಿಗೊಂದು ಮಹಾರಾಷ್ಟ್ರ ಬೇಕು, ಎಲ್ಲಿ ಗುಜರಾತಿಗಳಿದ್ದಾರೋ ಅವರಿಗೊಂದು ಗುಜರಾತು ಬೇಕು. ಹೀಗೆ ಒರಿಸ್ಸಾದವರೂ, ಬಂಗಾಳದವರೂ, ಕೇರಳರೂ ಒಂದೊಂದು ಪ್ರಾಂತವನ್ನು ಅವರವರ ಭಾಷಾಧಾರದ ಮೇಲೆ ನಿರ್ಮಿಸಿಕೊಡಬೇಕೆಂದು ಕೇಳುವುದಾದರೆ ಅಥವಾ ಹಾಗೆ ದೇಶವನ್ನು ವಿಂಗಡಿಸಬೇಕೆಂದು ಕೇಳುವುದಾದರೆ ಆಗ ನಮ್ಮ ಮನೆಯ ಪಕ್ಕದಲ್ಲಿರುವ ಗುಜರಾತಿ ಮತ್ತು ಸಿಂಧಿಗಳನ್ನು ನಾವು ಕಂಡ ಕೂಡಲೇ ಅವರನ್ನು ಒಂದು ವೈಷಮ್ಯ ದೃಷ್ಟಿಯಿಂದ ನೋಡಬೇಕಾದ ಪ್ರಮೇಯ ಬರುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬೇಕೆಂದಿದ್ದೇನೆ. ನಾನು ಎವರೆಸ್ಟ್ ಹೋಟೆಲಿನ ಕಡೆಗೆ ಒಂದು ದಿವಸ ಯಾವುದೋ ಒಂದು ಕಾರಣದಿಂದ ಹೋಗಬೇಕಾದ ಪ್ರಮೇಯ ಬಂದಿತ್ತು. ಆಗ ಅಲ್ಲಿ ಒಬ್ಬ ಆಂಧ್ರ ಭಾಷೆಯಾಡತಕ್ಕವನು, ಮತ್ತೊಬ್ಬ ತಮಿಳು ಭಾಷೆಯನ್ನಾಡತಕ್ಕವನು, ಈ ಇಬ್ಬರೂ ಒಂದು ಸಣ್ಣ ವಿಚಾರಕ್ಕಾಗಿ ಜಗಳ ಮಾಡಲು ಪ್ರಾರಂಭಿಸಿದರು. ತಮಿಳರವನು "ನೀ ಎನ್ನಡಪಂಡ್ರೆ! ನೀ ಎನ್ನಾಪೇಸ್ರದಿ!..." ಎಂದು ಇವನೂ ಮತ್ತು ಆ ಆಂಧ್ರಭಾಷೆಯನ್ನಾಡತಕ್ಕವನು "ಆಂಧ್ರ ಭಾಷೇ ವಸ್ತುಂದಿ, ಪೋರಾ ನೀಕೆಕ್ಕಡ ವಸ್ತುಂದಿ" ಎಂದೂ ಹೇಗೆ ಈ ಇಬ್ಬರೂ ಯಾವದೋ ಒಂದು ಅಲ್ಪ ವಿಷಯಕ್ಕಾಗಿ ವ್ಯಾಜ್ಯವನ್ನೇ ಪ್ರಾರಂಭಿಸಿಬಿಟ್ಟರು. ಆದರೂ ಇದು ಒಂದು ಬಹಳ ಮುಖ್ಯವಾದ ವಿಷಯ. ಕೇಂದ್ರ ಮುಖಂಡರ ನೀತಿಯೇನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಶಕ್ತಿ ಸಹ ಇಲ್ಲದಂಥ ಆ ಇಬ್ಬರು ಸಾಮಾನ್ಯ ವ್ಯಕ್ತಿಗಳು ಈ ಭಾಷಾ ಮೋಹಕ್ಕೆ ಮಂಕು ಹೋಗಿ ಯಾವುದೋ ಒಂದು ರೂಪದಲ್ಲಿ ಹಾಗೆ ವ್ಯಾಜ್ಯ ಮಾಡಿದ್ದನ್ನು ನೋಡಿ ನನ್ನ ಮನಸ್ಸಿಗೆ ಸಂಕಟವಾಯಿತು. ಇಂಥ ಒಂದು ಪರಿಸ್ಥಿತಿಯನ್ನು ನಮ್ಮ ದೇಶದಲ್ಲಿ ದೇವರು ನಮಗೆ ಉಂಟುಮಾಡದಿರಲೆಂದು ಪ್ರಾರ್ಥನೆಮಾಡುತ್ತೇನೆ. ಈ ಒಂದು ವಿಷಯವನ್ನು ನಾನು ಹೇಳಿದ್ದು ಉದಾಹರಣೆಯ ರೂಪವಾಗಿ ಅಷ್ಟೆ. ಆದರೆ ಹಾಗಾದರೆ ಬಳ್ಳಾರಿ ಈ ದಿವಸ ನಮಗೆ ಸೇರಿದ್ದು ಬಹಳ ಸಂತೋಷದ ವಿಚಾರ. ಆದರೆ ಇನ್ನು ಮುಂದೆ ನಮ್ಮ ವಾದಗಳು ಎಲ್ಲಿಯವರೆಗೂ ಹೋಗಬಹುದೆಂಬುದಕ್ಕೆ ಆ ಒಂದು ಸಣ್ಣ ಉದಾಹರಣೆಯನ್ನು ಕೊಟ್ಟೆ. ರಾಜ್ಯಾಂಗದ ಪ್ರಕಾರ ಯಾವ ಒಬ್ಬ ವ್ಯಕ್ತಿಯಾಗಲಿ ಅತನಿಗೆ ಅತನ ಮಾತೃಭಾಷೆಯಲ್ಲಿ ವಿದ್ಯೆ ಕಲಿಯುವ ಸೌಕರ್ಯಗಳಿರಬೇಕು ಎನ್ನುವುದೂ ಸಹ ಅದರಲ್ಲಿ ನಮೂದಾಗಿದೆ. ನಮ್ಮ ಇಂದಿನ ಎಜ್ಯುಕೇಷನ್ ರಿಫಾರಂನಲ್ಲಿ ಸಹ ಈ ತತ್ವ ಅಡಕವಾಗಿದೆ. ಅಂದಮೇಲೆ ರಾಜ್ಯಾಡಳಿತ ದೃಷ್ಟಿ ಮುಖ್ಯವೇ ಹೊರತು ಭಾಷೆ ಮುಖ್ಯವಲ್ಲ. ಹೀಗೆ ರಾಜ್ಯಾಡಳಿತ ದೃಷ್ಟಿಯಲ್ಲಿ ಮತ್ತು ಆ ರಾಜ್ಯಾಡಳಿತ ಎಲ್ಲೆಕಟ್ಟಿನಲ್ಲಿ ವಾಸವಾಗಿರತಕ್ಕಂಥ ಎಲ್ಲ ಜನರಿಗೂ ಸುಖಸಂತೋಷಗಳನ್ನುಂಟುಮಾಡತಕ್ಕಂಥ ಮತ್ತು ಅವರ ಕಷ್ಟಗಳನ್ನು ನಿವಾರಣೆ ಮಾಡತಕ್ಕಂಥ ಪ್ರಾಂತಗಳನ್ನು ನಿರ್ಮಿಸಬೇಕು. ಕನ್ನಡ ಜನರು ಹೆಚ್ಚಾಗಿದ್ದರೆ ಕನ್ನಡ ಪ್ರಾಂತಕೊಡಿ. ತೆಲುಗರು ಹೆಚ್ಚಾಗಿದ್ದರೆ ತೆಲುಗು ಪ್ರಾಂತಕೊಡಿ ಎಂಬ ವಾದವನ್ನೇ ಲಂಬಿಸಿಕೊಂಡು ಹೋದ ಪಕ್ಷದಲ್ಲಿ ಕೊನೆಗೆ ಅದರ ಪರಿಣಾಮ ಎಲ್ಲಿ ಮುಟ್ಟುತ್ತದೆ ಎಂಬುದನ್ನು ನಾವು ಕೂಲಂಕಷವಾಗಿ ನೋಡುವುದಾದ ಪಕ್ಷದಲ್ಲಿ ಅದು ಮನಸ್ಸಿಗೆ ಒಂದು ಭಯಾನಕವ ದೃಶ್ಯವನ್ನು ಉಂಟುಮಾಡತಕ್ಕದ್ದಾಗಿದೆ. ಆದಕ್ಕೀಗ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಕೆ. ಜಿ. ಎಫ್. ನಲ್ಲಿ ಹೆಚ್ಚಾಗಿ ತಮಿಳು ಮಾತನಾಡತಕ್ಕ ಜನರೇ ಇದ್ದಾರೆ. ಆ ಪ್ರದೇಶವನ್ನು ಬಿಟ್ಟು ಹೊರಗೆ ಬಂದರೆ ಅಲ್ಲಿ ಕನ್ನಡ ಮತ್ತು ತೆಲುಗು ಮಾತನ್ನಾಡತಕ್ಕ ಜನರೂ ಇದ್ದಾರೆ. ಹೀಗಿರತಕ್ಕ ಆ ಜನರಿಗೆ ಅವರವರ ಭಾಷೆಯನ್ನಾಡತಕ್ಕ ಜನಗಳಿಗೆ ಅವರ ಒಂದೊಂದು ಪ್ರಾಂತವನ್ನು ನಿರ್ಮಿಸಿಕೊಡಿ ಎಂದು ಕೇಳಿದರೆ ಅದು ಅರ್ಥವಿಲ್ಲದ ಮಾತು. ಹೀಗೆ ನಾವು ಒಂದೊಂದೇ ಅಂಶಗಳನ್ನು ನೋಡುತ್ತ ಹೋದಲ್ಲಿ ಇದು ಒಂದು ದೊಡ್ಡ ರೂಪವನ್ನು ತಾಳುತ್ತದೆ. ಆದುದರಿಂದ ನಮ್ಮ ಒಂದು ಸ್ಪಷ್ಟವಾದ ನೀತಿ ಈ ಬಗ್ಗೆ ಏನಿರಬೇಕೆಂಬುದನ್ನು ಆಲೋಚನೆ ಮಾಡಬೇಕಾಗಿದೆ. ರಾಜ್ಯಾಡಳಿತ ದೃಷ್ಟಿಯಿಂದ ಎಷ್ಟರಮಟ್ಟಿಗೆ ಅವಶ್ಯಕವಾಗಿರುತ್ತದೆಯೋ ಅಷ್ಟರಮಟ್ಟಿಗೆ ಒಂದು ಪ್ರಾಂತದ ಗಡಿಯನ್ನು ನಿರ್ಣಯಿಸತಕ್ಕದ್ದು ಅವಶ್ಯಕ. ಆ ಗಡಿಯ ಎಲ್ಲೆಯನ್ನು ಮೀರಿಹೋಗುವುದಕ್ಕೇ ಆಗಲಿ ಅಥವಾ ಆ ಎಲ್ಲೆಕಟ್ಟನ್ನು ಕಮ್ಮಿಮಾಡುವುದಕ್ಕೇ ಆಗಲಿ, ಅದನ್ನು ತೀರ್ಮಾನಮಾಡುವುದು ಗಡಿ ನಿರ್ಧಾರ ಸಮಿತಿಗೇ ಸೇರಿರತಕ್ಕದ್ದು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಆ ಬಳ್ಳಾರಿ ಏಳು ತಾಲ್ಲೂಕುಗಳನ್ನು ಮೈಸೂರಿಗೆ ಸೇರಿಸತಕ್ಕ ಸಂದರ್ಭದಲ್ಲಿ ಮೈಸೂರು ಸಂಸ್ಥಾನವನ್ನು 'ಎ' ದರ್ಜೆಯ ಸ್ಟೇಟನ್ನಾಗಿ, ಆ ಮಟ್ಟಕ್ಕೇರಿಸಬೇಕು ಎಂಬ ವಾದ ಅನೇಕ ದಿನಗಳಿಂದ ಇದೆಯೆಂದು ನನಗೆ ಮನವರಿಕೆಯಾಗಿದೆ. ಆದುದರಿಂದ ಮೈಸೂರು ಸಂಸ್ಥಾನಕ್ಕೆ ಸೇರುವ ಆ ಏಳು ತಾಲ್ಲೂಕಿಗೆ ಸೇರುವ ಜನರನ್ನು ನಾವು ಸಂತೋಷದಿಂದ ಆಹ್ವಾನಿಸತಕ್ಕದ್ದು ನಮ್ಮ ಕರ್ತವ್ಯವಾಗಿದೆ.

12 NOON.

ಇದರ ಜೊತೆಗೆ ಆ ಪ್ರಾಂತದಲ್ಲೂ ಸಹ ನಿಮ್ನ ವರ್ಗದವರಿರಬಹುದು. ಇಲ್ಲಿಯ ಸೌಕರ್ಯ ಏನೇನಿದೆಯೋ ಅವೂ ಸಹ ರಾಜ್ಯಾಂಗದಲ್ಲಿ ನಿರೂಪಿಸಿರುವ ರೀತಿಯಲ್ಲಿ ಉಳಿಸತಕ್ಕದ್ದು ಅವಶ್ಯಕ; ಅದಕ್ಕಾಗಿ ಅತ್ಯಗತ್ಯವಾದ ಈ ಒಂದು ಕಾರ್ಯವನ್ನು ಸರ್ಕಾರದವರು ಕೈಕೊಳ್ಳತಕ್ಕದ್ದು ಬಹಳ ಮುಖ್ಯವೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇಷ್ಟನ್ನು ಹೇಳಿ ಬಳ್ಳಾರಿ ಜಿಲ್ಲೆಯ ಎಲ್ಲಾ ಪ್ರಜೆಗಳಿಗೂ ನಾನು ಸುಸ್ವಾಗತವನ್ನು ಬಯಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri S. SRINIVASA IYENGAR.—It is now 12 o'clock. Under rule 39 we have to discuss the subject . . . .

Mr. SPEAKER.—At 12-30.

Sri S. SRINIVASA IYENGAR.—The sitting closes at 12-30.

Mr. SPEAKER.—Half an hour extra. If the House so desires, we will close the debate on the Andhra Bill now and continue it tomorrow.

Sri A. BHEEMAPPA NAIK.—It may be done.

Mr. SPEAKER.—This discussion will continue tomorrow. Now Question No. 294 by Sri K. Puttaswamy.

DISCUSSION ON MATTER ARISING OUT OF QUESTION No. 294.

PERMISSION GRANTED TO SRI MADHAVAKRISHNAIYA TO ENCLOSE LAND CONTAINING PUBLIC ROAD AND SEWER.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಅಧ್ಯಕ್ಷರೇ, ಈ 294ನೆಯ ಪ್ರಶ್ನೆ ಬೆಂಗಳೂರು ನಗರದಲ್ಲಿ ಟಿ. ಆರ್. ಮಿಲ್ಲಿಗೆ ಮಾಲೀಕರಾದ ಮಾಧವಕೃಷ್ಣಯ್ಯರವರಿಗೆ, ಇದುವರೆಗೆ ಸಾರ್ವಜನಿಕರು ಉಪಯೋಗಿಸುತ್ತಿದ್ದ ರಸ್ತೆಯನ್ನು ಆ ಮಿಲ್ಲಿನ ಆವರಣಕ್ಕೆ ಸೇರಿಸಿಕೊಳ್ಳುವ ಅವಕಾಶವನ್ನು ಕೊಟ್ಟ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಈ ರಸ್ತೆ ಕೆಂಪಾಂಬುಧಿ ಕೆರೆಗೆ ಹೋಗುವ ರಸ್ತೆ. ಆ ಮಿಲ್ಲಿನ ಆಕಡೆ ಕೆಂಪಾಂಬುಧಿ ಕೆರೆಯ ಕಡೆಗೆ 15 ಮನೆಗಳೂ ಮತ್ತು ಒಂದು ದೇವಸ್ಥಾನವೂ ಕೂಡ ಇದೆ. ಹೀಗಾಗಿ, ಈ ರಸ್ತೆ ಸಾರ್ವಜನಿಕ ಉಪಯೋಗದಲ್ಲಿತ್ತು. ಅಲ್ಲಿ ವ್ಯವಸಾಯಕ್ಕೆ ಉಪಯೋಗವಾಗುತ್ತಿದ್ದ ಜಮೀನನ್ನು ಮಾಧವಕೃಷ್ಣಯ್ಯನವರು ಕೊಂಡುಕೊಂಡು ಅಲ್ಲಿ ಮಿಲ್ಲನ್ನು ಕಟ್ಟಿ ಆ ರಸ್ತೆಯನ್ನು ಮಿಲ್ಲಿನ ಆವರಣಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಹಿಂದೊಮ್ಮೆ ಮಾಡಿದರು. ಈ ವಿಚಾರ ಸರ್ಕಾರಕ್ಕೆ ಪರ್ಯಾಲೋಚನೆಗೆ ಬಂದು 19-12-1951ರಲ್ಲಿ ಸರ್ಕಾರದವರು ಆ ಬಗ್ಗೆ ಒಂದು ಆಖೈರ್ ಆರ್ಡರನ್ನು ಮಾಡಿದರು. ಆ ಆರ್ಡರಿನ ಪ್ರಕಾರ ಈ ಸಾರ್ವಜನಿಕ ರಸ್ತೆಯನ್ನು ಮುಚ್ಚಕೂಡದೆಂತಲೂ, ಸುಮಾರು 40 ಅಡಿ ಅಗಲವಿರುವ ಒಂದು ರಸ್ತೆಯನ್ನು ಅಲ್ಲಿ ಬಿಡಬೇಕೆಂತಲೂ ಹೇಳಿ ಆ ಸರ್ಕಾರಿ ಆರ್ಡರಿನಲ್ಲಿ ನಮೂದಾಗಿತ್ತು.

ಅಲ್ಲದೆ ಈ ರಸ್ತೆಯ ಪ್ರದೇಶದಲ್ಲಿ ಒಂದು ಒಳಚರಂಡಿಯೂ ಇದೆ. ಈ ಒಳಚರಂಡಿಯನ್ನು ಬೇರೆ ಕಡೆ ಮಾಡಬೇಕಾದರೆ ಲಕ್ಷಾಂತರ ರೂಪಾಯಿಗಳ ವೆಚ್ಚ ಬೆಂಗಳೂರು ನಗರದ ಕಾರ್ಪೊರೇಷನ್ನಿಗೆ ತಗಲುತ್ತದೆಂಬ ಸಮಾಚಾರವನ್ನು ಮಂತ್ರಿಗಳು ಈ ಪ್ರಶ್ನೆಗೆ ಉತ್ತರಕೊಡುವಾಗ ಒಪ್ಪಿಕೊಂಡಿದ್ದಾರೆ. ಅದೂ ಅಲ್ಲದೆ high tension wire ಕೂಡ ಅಲ್ಲಿಯೇ ಹೋಗುತ್ತದೆ. ಈ ಎಲ್ಲಾ ವಿಚಾರಗಳನ್ನೂ ಸರ್ಕಾರದವರು ಮನಗಂಡೇ ಹಿಂದೆ ಸರ್ಕಾರದ ಮೂರು ಜನ ಮಂತ್ರಿಗಳು ಪರಿಶೀಲನೆಮಾಡಿ, ನಗರಾಧ್ಯಕ್ಷರೊಡನೆ ಆಲೋಚನೆ ಮಾಡಿ ಪೌರಸಭೆಯ ಅಧ್ಯಕ್ಷರನ್ನೂ ಕಾರ್ಪೊರೇಷನ್ ಮೇಯರನ್ನೂ ಕೇಳಿ ಒಂದು ಆಖೈರು ತೀರ್ಮಾನವನ್ನು ಕೊಟ್ಟರು. ಈ ಆರ್ಡರು 19-12-1951ರಲ್ಲೇ ಆಗಿದ್ದರೂ, ಆ ಸರ್ಕಾರದ ಆರ್ಡರನ್ನು ಈಚೆಗೆ ಕಳೆದ ವರ್ಷ ರದ್ದುಮಾಡಿ ಬೇರೆ ಆರ್ಡರನ್ನು ಸರ್ಕಾರದವರು ಮಾಡಿದ್ದಾರೆ. ಆ ರೀತಿ ಆರ್ಡರು ಬದಲಾವಣೆಯಾದ ಮೇಲೆ ಪ್ರೊಪ್ರೈಟರಾದ ಮಾಧವಕೃಷ್ಣಯ್ಯನವರು ಲೈಸೆನ್ಸ್ ಕೂಡ ಪಡೆಯದೆ ಆ ರಸ್ತೆಯನ್ನು ಮಿಲ್ಲಿನ ಆವರಣಕ್ಕೆ ಸೇರಿಸಿಕೊಂಡಿದ್ದಾರೆ. ಈ ಪ್ರಶ್ನೆ ಹಾಕಿದಾಗ ಮಂತ್ರಿಗಳು ಒಂದು ವಿಚಾರ ಹೇಳಿದರು. 41 ಜನ ಕಾರ್ಪೊರೇಷನ್ ಸದಸ್ಯರು ರುಜು ಹಾಕಿ ಈ ರಸ್ತೆಯನ್ನು ಅವರಿಗೆ ಕೊಟ್ಟಿದ್ದರಲ್ಲಿ ತಮ್ಮದೇನೂ ಅಡ್ಡಿಯಿಲ್ಲವೆಂದು ಹೇಳಿ ಅರ್ಜಿ ಕೊಟ್ಟಿದ್ದರೆಂದು ತಿಳಿಸಿದರು. ಕಾರ್ಪೊರೇಷನ್ನಿನ ಕೆಲವು ಸದಸ್ಯರು ಅಡ್ಡಿಯಿಲ್ಲವೆಂದು ಹೇಳಿ ಒಂದು ಕಾಗದ ಬರೆದು ಒಂದುವೇಳೆ ಕಳುಹಿಸಿದರೂ ಕೂಡ, ಅದೇ ಕಾನೂನುಬದ್ಧವಾದ ಲೈಸೆನ್ಸ್ ಆಗುವುದಿಲ್ಲ. ಸರ್ಕಾರದವರೇ ಈ ರಸ್ತೆಯನ್ನು ಕೊಟ್ಟಿದ್ದರೂ ಕೂಡ ಆತನು ಕಟ್ಟಿಕೊಳ್ಳಬೇಕಾದರೆ ಲೈಸೆನ್ಸ್ ಪಡೆದು ಕಟ್ಟಬೇಕೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ. ಮಂತ್ರಿಗಳು ಹೇಳಿದಪ್ರಕಾರ ನೋಡುವುದಾದರೆ, ಕಾರ್ಪೊರೇಷನ್ನಿನ ಸದಸ್ಯರು ಕೆಲವರು ಹೇಳಿದರೇನೇ ಸಾಕು, ಲೈಸೆನ್ಸ್ ಪಡೆಯಬೇಕಾಗಿಲ್ಲವೆಂದು ಭಾಸವಾಗುತ್ತದೆ. ಅಲ್ಲದೆ ಕಾರ್ಪೊರೇಷನ್ನಿನ ಯಾವ ಯಾವ ಸದಸ್ಯರು ರುಜುಮಾಡಿ ಕಳುಹಿಸಿದ್ದರೆಂದೂ ಹೇಳಿದರೋ ಅವರ ಪೈಕಿಯೇ ವಿಚಾರಿಸಿದ್ದರಲ್ಲಿ ಆ ರೀತಿಯಾಗಿ ಯಾರೂ ರುಜು ಮಾಡಿಲ್ಲವೆಂದು ಹೇಳಿದರು. ಆದ್ದರಿಂದ ಕೆಲವು ಸದಸ್ಯರು ರುಜು ಹಾಕಿ ಕಳುಹಿಸಿದ್ದು ನಿಜವಾದ ರುಜುವೋ ಅಲ್ಲವೋ ಎಂಬ ಸಂಶಯ ಕೂಡ ಬರುತ್ತದೆ. ಈ ಎಲ್ಲ ದೃಷ್ಟಿಯಿಂದ ಇದು ಬಹಳ ಪ್ರಾಮುಖ್ಯತೆಯನ್ನು ಪಡೆದ ವಿಷಯವಾಗಿದೆ. ಅದರಲ್ಲೂ ಮೂರು ಜನ ಮಂತ್ರಿಗಳು ಹೋಗಿ ಸ್ಥಳ ಅಜಮಾಯಿಷಿಮಾಡಿ, ಅಲ್ಲಿನ ಜನರನ್ನು ಕೇಳಿ, ಕಾರ್ಪೊರೇಷನ್ ಮೇಯರನ್ನೂ ಕೇಳಿ ವಾದವಿವಾದಗಳನ್ನು ಪರಿಗಣಿಸಿ, ಜೊತೆಗೆ ಪ್ರೊಪ್ರೈಟರ ಪರವಾದ ವಕೀಲರ ವಾದವನ್ನೂ ಪರಿಗಣಿಸಿ ಆರ್ಡರ್ ಮಾಡಿದ್ದನ್ನು ಏಕಾಏಕಿ ಮಂತ್ರಿಗಳು ಕಾರ್ಪೊರೇಷನ್ನಾಗಲಿ, ಟ್ರಸ್ಟ್ ಬೋರ್ಡನ್ನಾಗಲಿ ಸಾರ್ವಜನಿಕರ ಅಹವಾಲನ್ನಾಗಲಿ ಗಮನಿಸದೆ ರದ್ದುಮಾಡಿ ಬೇರೆ ಆರ್ಡರನ್ನು ಮಾಡಿದರೆ, ಜನರಿಗೆ ಸರ್ಕಾರದವರು ಮಾಡುವ ಆರ್ಡರುಗಳ ವಿಚಾರದಲ್ಲಿ ಯಾವ ಒಂದು ಆಖೈರು ಭಾವನೆಯೂ ಬರುವುದಿಲ್ಲ. ಯಾವ ಆರ್ಡರನ್ನೂ ಪದೇ ಪದೇ ಬದಲಾವಣೆ ಮಾಡಬಹುದು ಎಂಬ ಭಾವನೆ ಉಂಟಾಗಿ ಜನರಿಗೆ ಸರ್ಕಾರದ ಆರ್ಡರುಗಳಲ್ಲಿ ನಂಬಿಕೆಯೇ ಕಳೆದುಹೋಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಚಾರವಾದ್ದರಿಂದ ಈ ಸೂಚನೆಯನ್ನು ಮಾಡಿದ್ದೇನೆ. ತಾವು ಇದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ.

Sri M. V. RAMA RAO (Tumkur).—Sir, this matter really pertains to the question which I had put to be answered during the last session of the Assembly and the answers that were furnished in reply to the supplementaries did not throw sufficient light on the justification for the revision of the previous Government Order. Therefore, I should like to state briefly and pointedly the particular aspects of this matter on which

(SRI M. V. RAMA RAO.)

Government ought to make an explanation to this House. The points briefly are—if it is a fact as was admitted by the Hon'ble Minister who made the replies to my supplementaries that a panel of three Ministers of the previous Ministry who represented Government as much as three or lesser or greater number of....

Sri J. MOHAMED IMAM.—On a point of order, Sir. Rule 39 (5) states like this :

> " There shall be no formal motion before the Assembly nor voting. The Member who has given notice may make a short statement and the Minister concerned shall reply briefly. Any Member who has previously intimated to the Speaker may be permitted to put a question for the purpose of further elucidating any matter of fact."

According to this rule in our Rules of Procedure and Conduct of Business, only a Member who has given notice can make a statement and the Government can make a reply. Others cannot make statements....

Mr. SPEAKER.—Under the rules, the Hon'ble Member has given notice and I have permitted him to speak.

Sri J. MOHAMED IMAM.—I am sorry, Sir. I did not know that he has given notice.

Sri M. RAJASEKHARA MURTHY (Yelandur).—Sir, as per procedure, he can only questions and cannot make a statement, Sir.

Mr. SPEAKER.—I know that. Just with a view to make the matter clear, instead of allowing him to put questions, I thought it would be more desirable to allow him to make a short statement so that the Hon'ble Minister may make a final reply. The last sentence in sub-rule 5 lays stress upon this fact that a Member may be permitted to put a question rather than make a statement.

Sri M. PALANIYAPPAN (Ulsoor).—Can this be a precdeent, Sir?

Mr. SPEAKER.—Yes.

Sri M. V. RAMA RAO.—I may assure the Hon'ble Members who raised the two points of order that I am fully acquainted with the procedure and conduct of business as laid down in the Rules. I hope that my friends will realise that a question may involve more points than one and a question is not restricted to raise a single point according to the text of the rule. But while I thank them for having been so careful about those rules, I must say that the time taken in deciding these points of order may kindly be taken out of the time allotted to me for formulating my question, which, I may assure the House will not take more than five or six minutes.

The first thing that I wanted to point out to the Hon'ble Minister was that if it is true that a panel of three Ministers of the previous Ministry made an inspection of the locality and heard in Chambers counsel for Sri Madhava Krishnaiya, Proprietor of T.R. Mills and received representations from the public resident in the locality and then passed a considered order requiring a strip of land forty feet in width to be kept in reserve for public use in conformity with usage prevailing for a long time as had been represented to the Government satisfactorily, why was it considered sufficient or necessary by the Hon'ble the Minister for Local Self-Government who went there and said he made an inspection of the spot and received several representations from the owner of the Mill Sri Madhava Krishnaiya and others to which he made reference in the supplementaries answered on the occasion on which the question was put, to reverse the order which had been made by Government after adopting the very procedure that the present Ministry thought fit to follow? That is the first point. Secondly, when a supplementary was put seeking to know whether the Hon'ble Minister was aware when he went to inspect the locality that there

were 12 houses situated in the locality which were cut off from having the usual access to the public street, the reply given was that he had not observed those 12 houses. Would the Minister inform the House what kind of inspection he made if he did not notice the 12 houses? This particular slip, before it was allowed to be enclosed, afforded access both to the street as well as to the road leading to the Kempambudhi Tank. Thirdly, the other important point that has been raised was in regard to the sewer pipe belonging to the Corporation of Bangalore. It had been laid down previously in this land and the Corporation had spent a considerable sum of money. Government also have spent some money in putting up street lights there for the use of the public. If Government considered in this second order that was made, that it was reasonable and just that this land should be allowed to be enclosed just to enable Sri Madhava Krishnaiya to have one entire block of land for his own private use, why was no account taken of the fact that considerable sums of money had been expended by responsible bodies like the Government and the Corporation for providing street-lights and laying the sewer pipe? Why was no reservation made when allowing this land to be enclosed in respect of the rights of the Corporation and the Government that they should have access to their own property? Sir, the Minister also said on the last occasion that no estimate whatever had been made or even contemplated for shifting the sewer pipes to other land which belonged either to the Corporation or to the Government. May I ask why Government found it necessary to be in such a hurry to make this particular order so as to enable one person, one particular citizen, to secure these advanages for himself while it was not sufficiently mindful of the general interests of the residents, of the public, of the Government, of the Corporation and of the moneys for the spending of which this Government is responsible?

*Sri T. CHANNIAH (Minister for Public Health and Local Self-Government).—Mr. Speaker, Sir, two Hon'ble Members have raised certain points on which I am expected to reply. Sir, before I reply, I wish to mention a few relevant facts on which this question arose. Sir, in the year 23-3-1934, one acre of land was sanctioned to T. R. Mills for locating their two mills. Again Sri Madhava Krishniah had applied for certain lands to Government on 28-5-1951 for the expansion of the mill. The application made in that behalf was for 5 acres and 34 guntas out of Survey No. 16 of Terikenahalli and 2 acres 13 guntas out of Survey No. 65 of Gavipur village. This area was also sanctioned to him on 28-5-1951. There was a subsequent revision by the Government on 19-12-1951 after this area was given to Sri Madhava Krishniah for the location of the mills. On 19-12-1951 the revision was made as suggested by my friends. The revision was to the effect that a road of 40 feet breadth should be formed along with this land. I want to mention here that there was no footpath along this land previously.

Sri R. ANANTARAMAN.—It is not correct.

Sri T. CHANNIAH.—The village map shows that there was a footpath north-east to south towards Kempambudhi Tank. There is a road also running from east to west in front of the mill which takes a deviation to the south at the western end of the Mills and goes to the burial ground from where it can be extended to the tank bed at a lower cost. Sir, my friends said that I was responsible for revising the orders of the previous Government made on 19-12-1951. Of course, I went and inspected the spot by myself on the representation made by Sri Madhava Krishniah and I found on my personal inspection of the spot that the separation of the mills into

(SRI T. CHANNIAH.)

two blocks really created a lot of difficulties to the owner of the mills, one of the reasons being that it would break the compactness of the mill. He will have to meet additional expenditure because when a road passes through the mill separating it into two portions, he has to put up two compound walls, two gates and he has to keep additional watch and ward; there was the difficulty of transferring or transporting things from one mill to another and further it will not be conducive to compactness and safety. And also, Sir, in any industry or in any factory, from the point of view of safety, a road, dividing the area if formed, will create a lot of difficulties and troubles to the owner of the mill. So, there will be no safety to the labourers and also to the owner of the mill for preservation of articles and other materials in that area. So, I thought that in the interest of compactness, in the interest of the owner and in the interest of the labourer, a road in the midst of the mill is not necessary. Also, I thought, after my inspection, that the road along the sewage line will certainly involve a lot of expenditure because when it leads from the main road towards Kempambudhi Tank before it acutally reaches the Tank bed, there is a deep pit and therefore to make the road there will involve a lot of expenditure; further it will not be a straight road also. Instead, if a road is diverted in front of the mill towards the burial ground, *i.e.*, Agrahar, if the road leads along that Agrahar, the cost involved will be very much less and also it will be the best. I have not suggested in my order whether the cost of sewage line would be met by the Government or by Sri Madhava Krishniah. I therefore, think that the sewage line instead of running in the midst of the factory should be diverted towards the burial ground and the road also diverted. The second thing I want to mention before this House is that my Hon'ble friend Sri Rama Rao pointed out that the land did not belong to Sri Madhava Krishniah. All the land did belong to him and there was no necessity for him to have any acquisition proceedings to take place. It is merely a conversion of the land for another purpose and the right of conversion should lie with him. Therefore, he applied to Government and he got his mills expanded. After careful consideration of his representation, the Government reviewed the order passed by the Government on 19-12-1951. My Hon'ble Friend also said that there were about 12 houses in number and the Minister did not observe them and instead of allowing the land for the construction of the houses....

Sri M. V. RAMA RAO.—Those are not the things which I have said. I wish he had listened to what I had said. He has not touched any of the points I raised.

Sri T. CHANNIAH.—Of course, there was public agitation for reconsidering the Government Order allowing the conversion on the ground that a lay-out for dwelling houses has been made. It was also a fact that more than 40 members of the Corporation had signed that the lay-out is not necessary in that area.

Sri R. ANANTARAMAN (Chamarajpet).—It is incorrect.

Sri T. CHANNIAH.—Therefore, Sir, in the light of the agitation or recommendation by the Members of the Corporation, I thought that the application made by Sri Madhava Krishniah may be sanctioned and accordingly I considered very carefully that this sewage line may be diverted towards the burial ground and also the road diverted through some other way, so that it may involve least expenditure.

Sri K. PUTTASWAMY.—What was the opinion of the Corporation? And what was the second reason to set aside the orders passed by the predecessor Minister?

Mr. SPEAKER.—You have made a statement and the Minister has

made a reply. One of the pertinent questions raised by Sri M. V. Rama Rao is how the decision of the three Ministers who had made a spot inspection twice is set aside by one Minister. If the Hon'ble Minister is in a position to explain that, he may do so. Otherwise he may not.

12-30 P.M.

Sri T. CHANNIAH.—The order passed by the three Hon'ble Ministers is itself an order revising a previous order of Government in the same matter. I believe that order is a second or third order in revision.

Mr. SPEAKER.—Now discussion regarding Question No. 144.

Sri A. BHEEMAPPA NAIK (Molakalmuru).—No answer was given as regards the cost.

Mr. SPEAKER.—Nothing more can be given.

Sri K. HANUMANTHAIYA (Chief Minister).—I may state this for the information of the House. My friend Sri Bheemappa Naik has asked as to what would be the decision of Government regarding cost. We will examine the question.

Sri A. G. RAMACHANDRA RAO (Minister for Law and Education).—Regarding Question No. 144, I am anxious to give latest and up-to-date information. I request that this may be taken up the day after tomorrow.

Mr. SPEAKER.—We have two other Questions to be discussed the day after tomorrow. If the House so permits,—it may not take much time—this may be taken up even tomorrow.

Sri A. G. RAMACHANDRA RAO.—Yes.

Mr. SPEAKER.—The House will now rise for the day and meet tomorrow at 8-30 A.M.

The House adjourned at Thirty-two Minutes past Twelve of the Clock to meet again at Thirty Minutes past Eight of the Clock on Thursday the 23rd July 1953.

WD 4516—GPB—500—15-2-54